ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಬುಧವಾರ, ಮಾರ್ಚ್ 06, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 294 RNI : 27369/75

janathavani@mac.com
www.janathavani.com
08192 254736  91642 99999

## ದುಗ್ಗಮ್ಮನ ಜಾತ್ರೆ: ಭಕ್ತಾದಿಗಳಿಗೆ ಮೂಲ ಸೌಲಭ್ಯ ಕಲ್ಪಿಸಿ

### ಜಾತ್ರಾ ಪೂರ್ವಭಾವಿ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ಶಾಮನೂರು ಶಿವಶಂಕರಪ್ಪ ಸೂಚನೆ



ದಾವಣಗೆರೆ, ಮಾ. 5 - ನಗರದೇವತೆ ದುರ್ಗಾಂಬಿಕಾ ದೇವಿಯ ಜಾತ್ರೆಯು ಇದೇ ಮಾ.17 ರಿಂದ 20 ರ ವರೆಗೆ ಅದ್ಧೂರಿಯಾಗಿ ಜರುಗುವುದರಿಂದ ಭಕ್ತಾಧಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವಂತೆ ದಾವಣಗೆರೆ ದಕ್ಷಿಣ ಶಾಸಕರು ಹಾಗೂ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪ ಜಿಲ್ಲಾಡಳಿತ, ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ದೇವಸ್ಥಾನದ ಆವರಣದಲ್ಲಿ ಜಾತ್ರಾ ಸಿದ್ದತೆ ಪ್ರಯುಕ್ತ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಜಾತ್ರೆಗೆ ಲಕ್ಷಾಂತರ ಭಕ್ತಾದಿಗಳು ಆಗಮಿಸುವುದರಿಂದ ಜನರಿಗೆ ಸುಗಮ ಸಂಚಾರ, ನೀರಿನ ವ್ಯವಸ್ಥೆ, ವಿದ್ಯುತ್ ಪೂರೈಕೆ, ಪೊಲೀಸ್ ಬಂದೋಬಸ್ತ್, ಶೌಚಾಲಯದ ವ್ಯವಸ್ಥೆ ಸೇರಿದಂತೆ ಜನರ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದರು.

ಜಾತ್ರೆಯಲ್ಲಿ ಜನರು ಹರಕೆಯ ವಸ್ತುಗಳನ್ನು ಬಿಡುವುದು, ಹೂ, ಬೇವಿನಸೊಪ್ಪು ತರುವುದರಿಂದ ಆಗಿಂದಾಗ್ಗೆ ತೆರವು ಮಾಡಬೇಕಾಗುತ್ತದೆ. ಇದಕ್ಕಾಗಿ ಪಾಲಿಕೆಯಿಂದ ಸಿಬ್ಬಂದಿಗಳನ್ನು ನಿಯೋಜಿಸಬೇಕು. ಮತ್ತು ನಿರಂತರ ನೀರು ಸರಬರಾಜು ಮಾಡಬೇಕು. ದೇವಸ್ಥಾನದ ಬಳಿ ಎರಡು ಶೌಚಾಲಯಗಳು

> **ಜಾತ್ರೆಯನ್ನು ಸರ್ಕಾರ ಹೇಳಿದ ರೀತಿ ನಡೆಸಲಾಗುತ್ತದೆ, ಪ್ರಾಣಿಬಲಿ ನೀಡುವುದಿಲ್ಲ, ಮೌಢ್ಯಾಚರಣೆ ಮಾಡುವುದಿಲ್ಲ. ಎಲ್ಲಾ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡುವ ಮೂಲಕ ನಗರ ದೇವತೆ ಜಾತ್ರೆಯನ್ನು ಯಶಸ್ವಿಗೊಳಿಸಬೇಕು.**
> **- ಶಾಮನೂರು ಶಿವಶಂಕರಪ್ಪ**

ಇದ್ದು ಹೆಚ್ಚುವರಿಯಾಗಿ ಮೊಬೈಲ್ ಟಾಯ್ಲೆಟ್‌ಗಳನ್ನು ಪಾಲಿಕೆಯಿಂದ ಅಳವಡಿಸಬೇಕೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಪಾಲಿಕೆ ಆಯುಕ್ತರು ಮಾತನಾಡಿ ಪಾಲಿಕೆಯಿಂದ ಸ್ವಚ್ಚತೆಗೆ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. ಮತ್ತು ಈಗಾಗಲೇ ಇಲ್ಲಿನ ರಸ್ತೆ ಗುಂಡಿ ಮುಚ್ಚಲು, ಚರಂಡಿ ದುರಸ್ಥಿಗೆ ಹಾಗೂ ಈ ಭಾಗದಲ್ಲಿನ 40 ದೇವಸ್ಥಾನಗಳ ಸುಣ್ಣ ಬಣ್ಣಕ್ಕಾಗಿ ಪಾಲಿಕೆಯಿಂದ 2 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ ಎಂದರು.

ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಇದ್ದು ಪಾಲಿಕೆಯಿಂದ ಚರಂಡಿಗಳಿಗೆ ರಾಸಾಯನಿಕ ಸಿಂಪರಣೆ ಮಾಡಬೇಕು. ಆರೋಗ್ಯ ಇಲಾಖೆಯಿಂದ ಮೊಬೈಲ್ ಚಿಕಿತ್ಸಾಲಯ ನಿಯೋಜಿಸಿ ತುರ್ತು ಸೇವೆಗಾಗಿ ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಬೇಕು. ಬೆಸ್ಕಾಂ ಇಲಾಖೆ ನಿರಂತರ ವಿದ್ಯುತ್ ಪೂರೈಸಬೇಕು ಎಂದು ಸೂಚಿಸಿದರು.

ಜಾತ್ರೆಯಲ್ಲಿ ಜೇಬುಗಳ್ಳರು, ಸರಗಳ್ಳಲು ಹೆಚ್ಚಾಗುವ ಸಂದರ್ಭವಿರುತ್ತದೆ. ಎಲ್ಲಾ ಕಡೆ ಸಿಸಿ ಕ್ಯಾಮೆರಾ ಅಳವಡಿಕೆಯನ್ನು ದೇವಸ್ಥಾನ ಸಮಿತಿಯಿಂದ ಮಾಡಿಕೊಳ್ಳಬೇಕೆಂದು ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

18 ಕಡೆ ಚೆಕ್ ಪೋಸ್ಟ್‌ಗಳ ನಿರ್ಮಾಣ ಮಾಡಲಾಗುತ್ತದೆ. ರಸ್ತೆ ಬದಿಯಲ್ಲಿ ಅಂಗಡಿ ಮುಂಗಟ್ಟುಗಳಿಗೆ ಅವಕಾಶ ಮಾಡಿಕೊಡದೆ ಸುಗಮ ಸಂಚಾರಕ್ಕಾಗಿ ಅನುಕೂಲ ಮಾಡಿಕೊಡಬೇಕು. ಬ್ಯಾರಿಕೇಡಿಂಗ್ ವ್ಯವಸ್ಥೆ ಮಾಡಬೇಕಾಗುತ್ತದೆ. ಸಾಮಾಜಿಕ ಜಾಲತಾಣದಲ್ಲಿ ದ್ವೇಷ ಹುಟ್ಟಿಸುವ ಪೋಸ್ಟ್‌ಗಳನ್ನು ಹಾಕಬಾರದು. ಜಾತ್ರಾ ವೇಳೆ ಜಗಳಗಳು ನಡೆಯದಂತೆ ದೇವಸ್ಥಾನ ಸಮಿತಿಯಿಂದ (4ನೇ ಪುಟಕ್ಕೆ)

## ರಾಜ್ಯದ ಬರ ನಿರ್ವಹಣೆಗೆ ಸಹಾಯವಾಣಿ ಸ್ಥಾಪಿಸಿ

ಬೆಂಗಳೂರು, ಮಾ. 5 - ಬರ ನಿರ್ವಹಣೆಗೆ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಸಹಾಯವಾಣಿ, ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಡಳಿತಗಳಿಗೆ ಆದೇಶ ಮಾಡಿದ್ದಾರೆ.

ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗಿದ್ದರೂ ಗ್ಯಾರಂಟಿ ಯೋಜನೆಗಳಿಂದ ಯಾರೂ ಸಂಕಷ್ಟಕ್ಕೆ ಸಿಲುಕಿಲ್ಲ. ಆದರೆ, ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ ಎಂದಿದ್ದಾರೆ.

ಕುಡಿಯುವ ನೀರಿನ ಸಮಸ್ಯೆಯನ್ನು ತಕ್ಷಣವೇ ಬಗೆಹರಿಸಬೇಕು, ಅದಕ್ಕೆ ಅಗತ್ಯವಿರುವ ಎಷ್ಟೇ ಹಣವನ್ನು ನೀಡುವುದಾಗಿ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿ ಹಾಗೂ ಸಿಇಒಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದುವರೆಗೂ ಮೇವಿಗೆ ಕೊರತೆಯಾಗಿಲ್ಲ. ಆದರೆ, ಕುಡಿಯುವ ನೀರಿನ ಸಮಸ್ಯೆ ಎದುರಿಸಲು ಹೊಸ ಕೊಳವೆಬಾವಿ ಕೊರೆಯಲು 240 ಕೋಟಿ ರೂ. ಬಿಡುಗಡೆ ಮಾಡಿರುವುದಾಗಿ ತಿಳಿಸಿದರು.

ಮುನ್ನೆಚ್ಚರಿಕೆಯಾಗಿ ಮೇವು ಬೆಳೆಯಲು ಹೆಚ್ಚುವರಿಯಾಗಿ 40 ಕೋಟಿ ರೂ.ಗಳನ್ನು ಇಂದು ಬಿಡುಗಡೆ ಮಾಡಲಾಗಿದೆ. ಇದಲ್ಲದೆ, ಜಿಲ್ಲಾಧಿಕಾರಿಗಳ ಬಳಿ ಪಿಡಿ ಖಾತೆಯಲ್ಲೇ 854 ಕೋಟಿ ರೂ.ಗಳು ಲಭ್ಯವಿದೆ.

ಬರ ನಿರ್ವಹಣೆಗಾಗಿ ಎಷ್ಟೇ ಹಣವನ್ನಾದರೂ ಸರ್ಕಾರ ನೀಡಲು ಸಿದ್ಧವಿದೆ, ಸಾರ್ವಜನಿಕರಿಗೆ ಯಾವುದೇ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳುವ ಹೊಣೆ ಜಿಲ್ಲಾಡಳಿತದ ಹೆಗಲಿಗೆ ಹಾಕಿದ್ದೇವೆ ಎಂದರು.

ಯಾವುದೇ ಮೂಲೆಯಲ್ಲಿ ಬರದಿಂದ ಸಮಸ್ಯೆ ಎದುರಾದರೆ ತಕ್ಷಣವೇ ನಿಯಂತ್ರಣ ಕೊಠಡಿ ಸಂಪರ್ಕಿಸಿ ದೂರು ದಾಖಲಿಸಿ, ಕಾಲಮಿತಿಯೊಳಗೆ ಅಧಿಕಾರಿಗಳು ಪರಿಹಾರ ನೀಡಲಿದ್ದಾರೆ ಎಂದರು. ರಾಜ್ಯದಲ್ಲಿ ಮುಂದಿನ ಮೂರು ತಿಂಗಳಲ್ಲಿ (4ನೇ ಪುಟಕ್ಕೆ)

### ಜಿಲ್ಲೆಯಲ್ಲಿ 175 ಸಮಸ್ಯಾತ್ಮಕ ಗ್ರಾಮಗಳು: ಡಿಸಿ ವೆಂಕಟೇಶ್

ದಾವಣಗೆರೆ, ಮಾ.5- ಜಿಲ್ಲೆಯಲ್ಲಿ 5 ತಾಲ್ಲೂಕಿನ 36 ಪಂಚಾಯಿತಿ ವ್ಯಾಪ್ತಿಯಲ್ಲಿ 175 ಗ್ರಾಮಗಳನ್ನು ಸಮಸ್ಯಾತ್ಮಕ ಗ್ರಾಮಗಳೆಂದು ಗುರುತಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಹೇಳಿದರು.

ಮಂಗಳವಾರ ಮುಖ್ಯಮಂತ್ರಿಗಳೊಂದಿಗೆ ನಡೆದ ವಿಡಿಯೋ ಸಂವಾದದಲ್ಲಿ ಪಾಲ್ಗೊಂಡು ಅವರು ಜಿಲ್ಲೆಯ ಬರ ಪರಿಸ್ಥಿತಿ ಬಗ್ಗೆ ವಿವರಿಸಿದರು.

ಸಮಸ್ಯಾತ್ಮಕ ಗ್ರಾಮಗಳಲ್ಲಿ ಕುಡಿಯುವ ನೀರು ಪೂರೈಕೆಗಾಗಿ ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಲಾಗಿದೆ. ಇಲ್ಲಿಯವರೆಗೆ 21 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆದು ನೀರು ಪೂರೈಕೆ ಮಾಡಲಾಗುತ್ತಿದೆ ಎಂದು ಹೇಳಿದರು.

ತುರ್ತು ಸಂದರ್ಭದಲ್ಲಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲು ಎಲ್ಲಾ ತಾಲ್ಲೂಕುಗಳಲ್ಲಿ ಟ್ಯಾಂಕರ್ ಸರಬರಾಜು ಮಾಡಲು ದರಪಟ್ಟಿ ನಿಗದಿಗೆ ಟೆಂಡರ್ ಪ್ರಕ್ರಿಯೆಯೂ ಪೂರ್ಣಗೊಂಡಿದೆ. ಜಿಲ್ಲೆಯಲ್ಲಿ ಮುಂದಿನ 37 ವಾರಗಳಿಗಾಗುವಷ್ಟು ಮೇವು ಲಭ್ಯವಿದೆ. ಮುಂದಿನ ದಿನಗಳಲ್ಲಿ ಬರಗಾಲದಿಂದ ಮೇವಿನ ಕೊರತೆಯಾಗಬಾರದೆಂದು ಮೇವಿನ ಕಿಟ್ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ. ಜೊತೆಗೆ ಮೇವು ಕೊರತೆಯಾದಾಗ ನೆರವಿಗೆ ಮೇವಿನ ಬ್ಯಾಂಕ್ ತೆರೆಯಲು ಸ್ಥಳ ಗುರುತಿಸಲಾಗಿದೆ.

ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ರೂ.16.78 ಕೋಟಿ ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರರ ಪಿ.ಡಿ. ಖಾತೆಯಲ್ಲಿ ರೂ.2.67 ಕೋಟಿ ಅನುದಾನ ಲಭ್ಯವಿದೆ. ಬರಪರಿಹಾರದ ಕಂಟ್ರೋಲ್ ರೂಂಗಳು 24x7 ಕೆಲಸ ನಿರ್ವಹಿಸಲು ಸಹಾಯವಾಣಿ ಎಲ್ಲಾ ತಾಲ್ಲೂಕುಗಳಲ್ಲಿ ಸ್ಥಾಪಿಸಲು ಸೂಚಿಸಿ ಈಗಾಗಲೇ ಜಿಲ್ಲಾ ಪಂಚಾಯತ್‌ನಿಂದ 08192-226655 ಸಹಾಯವಾಣಿ ಸ್ಥಾಪಿಸಿ ದಿನದ ಮೂರು ಪಾಳಿಯಲ್ಲಿ ಕೆಲಸ ಮಾಡಲು ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಎಲ್ಲಾ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ರೂ.855 ಕೋಟಿ ಬರನಿರ್ವಹಣೆಯ ಅನುದಾನ ಲಭ್ಯವಿದ್ದು ಇದರೊಂದಿಗೆ ಪ್ರತಿ ಜಿಲ್ಲೆಗೆ ರೂ.2 ಕೋಟಿ ಹೆಚ್ಚುವರಿಯಾಗಿ ಅನುದಾನ ಬಿಡುಗಡೆ ಮಾಡಲಾಗುತ್ತದೆ ಎಂದರು. (4ನೇ ಪುಟಕ್ಕೆ)



## ಕ್ರೀಡಾಪಟುಗಳ ನೇಮಕ, ಬಡ್ತಿ ಮಾರ್ಗಸೂಚಿ ಪರಿಷ್ಕರಣೆ

ನವದೆಹಲಿ, ಮಾ. 5 – ಕ್ರೀಡಾಪಟುಗಳ ನೇಮಕ ಹಾಗೂ ಬಡ್ತಿಗೆ ಸಂಬಂಧಿಸಿದಂತೆ ಈಗಿರುವ ಮಾರ್ಗಸೂಚಿಗಳನ್ನು ಕೇಂದ್ರ ಸರ್ಕಾರ ಪರಿಷ್ಕರಿಸಿದೆ. ಇತ್ತೀಚಿನ ದಿನಗಳಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿರುವ ಕ್ರೀಡೆಗಳನ್ನು ಸೇರ್ಪಡೆ ಮಾಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ಕೇಂದ್ರ ಸಿಬ್ಬಂದಿ ಹಾಗೂ ತರಬೇತಿ ಇಲಾಖೆಯು ಈ ಬಗ್ಗೆ ಹೊಸ ಮಾರ್ಗಸೂಚಿಯನ್ನು ಪ್ರಕಟಿಸಿದೆ. ಅದರ ಅನ್ವಯ ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳು ವೈಯಕ್ತಿಕ ವಿಭಾಗದಲ್ಲಿ ನಡೆಸುವ ಸ್ಪರ್ಧೆಗಳು, ಭಾರತೀಯ ಒಲಂಪಿಕ್ ಒಕ್ಕೂಟ ನಡೆಸುವ ಸ್ಪರ್ಧೆಗಳು, ಖೇಲೋ ಇಂಡಿಯಾ ವಿಶ್ವವಿದ್ಯಾಲಯ, ಖೇಲೋ ಇಂಡಿಯಾ ಯುವ ಪಂದ್ಯಾವಳಿ, ಖೇಲೋ ಇಂಡಿಯಾ ಚಳಿಗಾಲದ ಆಟಗಳು ಹಾಗೂ ಖೇಲೋ ಇಂಡಿಯಾ ಪ್ಯಾರಾ ಕ್ರೀಡೆಗಳು ರಾಷ್ಟ್ರೀಯ ಪ್ರಾಮುಖ್ಯತೆಯವು ಎಂದು ಪರಿಗಣಿಸಲಾಗಿದೆ.

## ಪ್ರಣಾಳಿಕೆಯಲ್ಲಿ ಉದ್ಯೋಗದ ಹಕ್ಕು ಪ್ರಸ್ತಾಪಿಸಲು ಕಾಂಗ್ರೆಸ್ ನಿರ್ಧಾರ

ನವದೆಹಲಿ, ಮಾ. 5 – ಮುಂಬರುವ ಲೋಕಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಉದ್ಯೋಗದ ಹಕ್ಕು ಪ್ರಸ್ತಾಪಿಸಲು ಕಾಂಗ್ರೆಸ್ ಪಕ್ಷ ನಿರ್ಧರಿಸಿದೆ. ಪ್ರಶ್ನೆಪತ್ರಿಕೆ ಸೋರಿಕೆಗೆ ಕಾರಣರಾಗುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವ ಪ್ರಸ್ತಾಪವನ್ನೂ ಪ್ರಣಾಳಿಕೆಯಲ್ಲಿ ಸೇರಿಸಲು ಉನ್ನತ ನಾಯಕರು ನಿರ್ಧರಿಸಿದ್ದಾರೆ.

## ದೂಡಾ ಸಭೆಯಲ್ಲಿ ಸಚಿವ ಎಸ್ಸೆಸ್ಸೆಂ ಶಾಸಕ ಹರೀಶ್ ನಡುವೆ ವಾಕ್ಸಮರ



ದಾವಣಗೆರೆ, ಮಾ.5 ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸಂಜೆ ನಡೆದ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಎಸ್.ಮಲ್ಲಿಕಾರ್ಜುನ್ ಹಾಗೂ ಹರಿಹರದ ಶಾಸಕ ಬಿ.ಪಿ.ಹರೀಶ್ ನಡುವೆ ವಾಕ್ಸಮರ ನಡೆದಿದೆ.

ಸಚಿವ ಎಸ್ಸೆಸ್ಸೆಂ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುತ್ತಿದ್ದ ವೇಳೆ ಅಕ್ರಮವಾಗಿ ಡೋರ್ ನಂಬರ್ ನೀಡಿ, ಲೇ ಔಟ್ ಫೈನಲ್ ಮಾಡಲಾಗಿದೆ. ತಕ್ಷಣ ಅದನ್ನು ವಾಪಾಸ್ ಪಡೆಯಬೇಕು. ಯಾವ ಕಾರಣಕ್ಕೂ ಡೋರ್ ನಂಬರ್ ನೀಡಬಾರದು ಎಂದು ಶಾಸಕ ಹರೀಶ್ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಸಚಿವ ಮಲ್ಲಿಕಾರ್ಜುನ್ ಮಾತನಾಡಿ, ಡೋರ್ ನಂಬರ್ ನೀಡುವುದು ಅಲ್ಲಿನ ನಗರಸಭೆಯೇ ಹೊರತು, ದೂಡಾ ಅಲ್ಲ. ಒಂದು ವೇಳೆ ಯಾವುದೇ ಲೇಔಟ್, ಡೋರ್ ನಂಬರ್ ಬಗ್ಗೆ ಅನುಮಾನವಿದ್ದರೆ ಲಿಖಿತವಾಗಿ, ನಿರ್ದಿಷ್ಟವಾಗಿ ದೂರು ನೀಡಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ನೀವು ಬಿಜೆಪಿಯವರು ಐದು ವರ್ಷ ಲೂಟಿ ಹೊಡೆದು ಹೋದವರು ಎಂದು (4ನೇ ಪುಟಕ್ಕೆ)

## ಉದ್ಯೋಗಕ್ಕೆ ಇಂಗ್ಲಿಷಿದ್ದರೂ ಮನಸ್ಸು ಕನ್ನಡವಾಗಿರಲಿ: ಸಾಹಿತಿ ಬಿ.ಟಿ. ಜಾಹ್ನವಿ



ದಾವಣಗೆರೆ, ಮಾ. 5 - ಉದ್ಯೋಗಕ್ಕಾಗಿ ಇಂದು ಇಂಗ್ಲಿಷ್ ಬೇಕಾಗಿದ್ದರೂ, ಮನಸ್ಸು ಮಾತ್ರ ಕನ್ನಡವೇ ಆಗಿರಲಿ. ಎಲ್ಲೇ ಇದ್ದರೂ ಕನ್ನಡವಾಗಿರುವುದು ಪ್ರತಿಯೊಬ್ಬ ಕನ್ನಡಿಗನ ಹೆಬ್ಬಯಕೆಯಾಗಿರಬೇಕಿದೆ ಎಂದು ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷೆ ಬಿ.ಟಿ. ಜಾಹ್ನವಿ ಹೇಳಿದ್ದಾರೆ.

ಇಲ್ಲಿಗೆ ಸಮೀಪದ ಹೆಬ್ಬಾಳಿನ ಶ್ರೀ ರುದ್ರೇಶ್ವರ ವಿರಕ್ತಮಠದ ಅನುಭವ ಮಂಟಪದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಲಾಗಿದ್ದ 10ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂಗ್ಲಿಷ್ ವ್ಯಾಮೋಹದಿಂದ ಕನ್ನಡ ಕುಂದುತ್ತಿದೆ. ವ್ಯಾವಹಾರಿಕವಾಗಿ ಕನ್ನಡ ಬಳಕೆ ಕಡಿಮೆಯಾಗುತ್ತಿದೆ. ವೃತ್ತಿಪರ ಶಿಕ್ಷಣ, ತಾಂತ್ರಿಕ ಶಿಕ್ಷಣ ಹಾಗೂ ಉದ್ಯೋಗಿಗಳಿಗೆ ಇಂಗ್ಲಿಷ್ ಕಡ್ಡಾಯವಾಗುತ್ತಿದೆ ಎಂದು ಹೇಳಿದರು.

ಇಂಗ್ಲಿಷ್ ವಿರೋಧಿಸಿ ಭಾವನಾತ್ಮಕವಾಗಿ ಕೂಗಾಡಿದರೆ ಪ್ರಯೋಜನವಿಲ್ಲ. ಕನ್ನಡಕ್ಕಿಂತಲೂ ಪ್ರಾಮುಖ್ಯತೆ ಪಡೆಯುವಷ್ಟು ಇಂಗ್ಲಿಷ್ ಇಂದು ಅನಿವಾರ್ಯ ಆಗಿದೆ. ನಿತ್ಯ ಮಾತಿನ ಮುಕ್ಕಾಲು ಭಾಗ ಇಂಗ್ಲೀಷೇ ಆಗಿದೆ ಎಂದು ಜಾಹ್ನವಿ ಹೇಳಿದರು.

ಈ ವಾಸ್ತವವನ್ನು ಒಪ್ಪಿಕೊಳ್ಳಬೇಕಿದೆ. ಭಾವನಾತ್ಮಕವಾಗಿ ಆವೇಶಗೊಳ್ಳುವ ಬದಲಿಗೆ ತಾರ್ಕಿಕವಾಗಿ ಚಿಂತಿಸಿ ಕ್ರಿಯಾತ್ಮಕವಾಗಿ ವರ್ತಿಸಬೇಕಿದೆ. ಶಿಕ್ಷಣ ಹಾಗೂ ಉದ್ಯೋಗಕ್ಕೆ ಭಾಷೆ ಇಂಗ್ಲಿಷೇ ಆಗಿದ್ದರೂ ಮನಸ್ಸು ಕನ್ನಡವಾಗಿರಲಿ. ಈ ನಿಟ್ಟಿನಲ್ಲಿ ಎಲ್ಲಾದರೂ ಇರು, ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬ ಕವಿವಾಣಿ ಪ್ರತಿಯೊಬ್ಬ ಕನ್ನಡಿಗನ ಹೆಬ್ಬಯಕೆಯಾಗಲಿ ಎಂದವರು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಕೆ.ಎಸ್. ಬಸವಂತಪ್ಪ, ಕನ್ನಡಿಗರು ತಮ್ಮ ಭಾಷೆಯ ಬಗ್ಗೆ ಅಭಿಯಾನ ಬೆಳೆಸಿಕೊಳ್ಳಬೇಕು. ದೇಶದಲ್ಲೇ ಕನ್ನಡ ಪರಂಪರೆ ಮಾದರಿ ಆಗಬೇಕು ಎಂದರು. (2ನೇ ಪುಟಕ್ಕೆ)

### ಮಾತು ಕೇಳದ ಸಮ್ಮೇಳನ

ಸಮ್ಮೇಳನದ ಸಭಾಂಗಣದಲ್ಲಿ ಮಾತುಗಳು ಪ್ರತಿಧ್ವನಿಸುತ್ತಿದ್ದವು. ಮೈಕ್ ಆಗಾಗ ಕೈ ಕೊಡುತ್ತಿತ್ತು. ನಡುವೆ ಕರೆಂಟ್ ಸಹ ಕೈ ಕೊಟ್ಟಿತು. ಇದರಿಂದಾಗಿ ಸಮ್ಮೇಳನದ ಅತಿಥಿಗಳ ಮಾತಿಗೆ ಅಡ್ಡಿಯಾಗಿತ್ತು. ಈ ಬಗ್ಗೆ ಪ್ರಸ್ತಾಪಿಸಿದ ನಿಕಟಪೂರ್ವ ತಾಲ್ಲೂಕು ಸಮ್ಮೇಳನಾಧ್ಯಕ್ಷ ಬಿ.ಎನ್. ಮಲ್ಲೇಶ್, ಮಾತುಗಳನ್ನು ಕೇಳಲು ಸಮ್ಮೇಳನ ನಡೆಸಲಾಗುತ್ತದೆ. ಮಾತುಗಳಿಂದಲೇ ಸಾಹಿತ್ಯ ಸಮ್ಮೇಳನ. ಮಾತು ಕೇಳದಿದ್ದರೆ ಸಮ್ಮೇಳನ ನಡೆಸುವುದು ಏಕೆ? ಎಂದು ಪ್ರಶ್ನಿಸಿದರು. ಗ್ರಾಮೀಣ ಭಾಗಗಳಲ್ಲಿ ಸಮ್ಮೇಳನ ಮಾಡುವುದರಿಂದ ಆ ಭಾಗಗಳಲ್ಲಿ ಸಾಹಿತ್ಯ ಪಸರಿಸುತ್ತದೆ. ಗ್ರಾಮೀಣ ಭಾಗಗಳಲ್ಲಿ ಸಮ್ಮೇಳನ ನಡೆಸುವುದು ಸೂಕ್ತ ಎಂದೂ ಹೇಳಿದರು.

## ಅಕ್ರಮ ಹಣ : ಡಿ.ಕೆ. ಶಿವಕುಮಾರ್ ವಿರುದ್ಧದ ಪ್ರಕರಣ ವಜಾ

ನವದೆಹಲಿ, ಮಾ. 5 – ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಅಕ್ರಮ ಹಣ ತನಿಖೆಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.


ಶಿವಕುಮಾರ್ ವಿರುದ್ಧ ಜಾರಿ ನಿರ್ದೇಶನಾಲಯ ಕಳಿಸಿದ್ದ ಸಮನ್ಸ್ ವಜಾಗೊಳಿಸಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿತ್ತು. ನಂತರ ಶಿವಕುಮಾರ್ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ (4ನೇ ಪುಟಕ್ಕೆ)

## 2023ರಲ್ಲಿ ನಿರುದ್ಯೋಗ ಶೇ.3.1ಕ್ಕೆ ಇಳಿಕೆ

ನವದೆಹಲಿ, ಮಾ. 5 – 15 ವರ್ಷ ಮೀರಿದವರ ನಿರುದ್ಯೋಗ ಪ್ರಮಾಣ 2023ರಲ್ಲಿ ಶೇ.3.1ಕ್ಕೆ ಇಳಿಕೆಯಾಗಿದೆ. ಕಳೆದ 3 ವರ್ಷಗಳಲ್ಲೇ ಇದು ಅತ್ಯಂತ ಕಡಿಮೆ ಎಂದು ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಘಟನೆ (ಎನ್.ಎಸ್.ಎಸ್.ಒ.) ತಿಳಿಸಿದೆ. 2022ರಲ್ಲಿ ನಿರುದ್ಯೋಗ ದರ ಶೇ.3.6 ಹಾಗೂ 2021ರಲ್ಲಿ ಶೇ.4.2ರಷ್ಟಿತ್ತು ಎಂದು ಸಮೀಕ್ಷೆ ತಿಳಿಸಿದೆ.

**ನೇರ್ಲಿಗೆ ಎಂ.ಆರ್. ಮರುಳಸಿದ್ದಯ್ಯ ನಿಧನ**



ದಾವಣಗೆರೆ ತರಳಬಾಳು ಬಡಾವಣೆ, ವಿದ್ಯಾನಗರ, 2ನೇ ಮೇನ್, 1ನೇ ಕ್ರಾಸ್ ಐಟಿಐ ಕಾಲೇಜು ಎದುರು, ಡೋರ್ ನಂ. 1101 ವಾಸಿ, ನಿವೃತ್ತ ಬೆಸ್ಕಾಂ ನೌಕರರಾದ **ಶ್ರೀ ನೇರ್ಲಿಗೆ ಎಂ.ಆರ್. ಮರುಳಸಿದ್ದಯ್ಯ** ಅವರು ದಿನಾಂಕ 05-03-2024ರ ಮಂಗಳವಾರ ಸಂಜೆ 6.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 06-03-2024ರ ಬುಧವಾರ ಬೆಳಿಗ್ಗೆ 11 ಗಂಟೆಯವರೆಗೆ ತರಳಬಾಳು ಬಡಾವಣೆ, ವಿದ್ಯಾನಗರದಲ್ಲಿರುವ (#1101) ಮೃತರ ಸ್ವಗೃಹದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ನೇರ್ಲಿಗೆ ಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೃತರ ಧರ್ಮಪತ್ನಿ ಶ್ರೀಮತಿ ಲೋಹಿತಾಕ್ಷಿ
ನೇರ್ಲಿಗೆ ವಂಶಸ್ಥರು, ಬಂಧು-ಮಿತ್ರರು ಹಾಗೂ ಗ್ರಾಮಸ್ಥರು, ನೇರ್ಲಿಗೆ
ಮೊ. : 87626 17651, 94823 51380

॥ ಶ್ರೀ ಬಸವೇಶ್ವರ ಸ್ವಾಮಿ ಪ್ರಸನ್ನ ॥ ॥ ಶ್ರೀ ಗುರು ಬಕ್ಕೇಶ್ವರಸ್ವಾಮಿ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ**



ದಾವಣಗೆರೆ ಜಿ॥ ಜಗಳೂರು ತಾಲ್ಲೂಕು ಉದ್ದಗಟ್ಟ ಗ್ರಾಮದ ವಾಸಿಗಳಾದ ದಿ. ಶ್ರೀಮತಿ ವನಜಾಕ್ಷಮ್ಮ ಶ್ರೀ ಕಿತ್ತೂರು ಜಯ್ಯಣ್ಣ ದಾವಣಗೆರೆ ಇವರ ಮಕ್ಕಳಾದ ಶ್ರೀಮತಿ ಕೆ.ಜೆ. ಶ್ವೇತಾ ಜಿ.ಎಂ. ಶಶಿಕುಮಾರ್ ಮತ್ತು ಶ್ರೀಮತಿ ಕೆ.ಜೆ. ಸುಧಾ ಚಂದ್ರಶೇಖರಗೌಡ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 01.03.2024ನೇ ಶುಕ್ರವಾರ ಬೆಳಿಗ್ಗೆ 7.10ಕ್ಕೆ ನನ್ನ ಪೂಜ್ಯ ತಂದೆಯವರಾದ
**ಶ್ರೀ ಕಿತ್ತೂರು ಜಯ್ಯಣ್ಣನವರು**
ಇವರು, ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ 06.03.2024ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಉದ್ದಗಟ್ಟ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು.
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಲು ವಿನಂತಿ.

ದುಃಖತಪ್ತ ಕುಟುಂಬ ವರ್ಗ
ಪುತ್ರಿ - ಅಳಿಯ :
ಶ್ರೀಮತಿ ಶ್ವೇತಾ ಮತ್ತು ಶಶಿಕುಮಾರ್ ಜಿ.ಎಂ. ಹಾಗೂ ಮಕ್ಕಳು
ಪುತ್ರಿ - ಅಳಿಯ :
ಶ್ರೀಮತಿ ಸುಧಾ ಕೆ.ಜೆ. ಮತ್ತು ಚಂದ್ರಶೇಖರಗೌಡ ಹಾಗೂ ಮಕ್ಕಳು
ಕೆ.ಎನ್. ಹಾಲಪ್ಪ ನಿವೃತ್ತ ಪೊಲೀಸ್

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಮಲೇಬೆನ್ನೂರಿನಲ್ಲಿ ನಾಡಿದ್ದು 108 ಶಿವಲಿಂಗಗಳ ಬೃಹತ್ ಶೋಭಾಯಾತ್ರೆ : ಹೆಲಿಕ್ಯಾಪ್ಟರ್‌ನಿಂದ ಪುಷ್ಪವೃಷ್ಟಿ



ಮಲೇಬೆನ್ನೂರು, ಮಾ. 5- ಇಲ್ಲಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಮಹಾಶಿವರಾತ್ರಿ ಪ್ರಯುಕ್ತ ಇದೇ ದಿನಾಂಕ 8ರ ಶುಕ್ರವಾರ ಮಲೇಬೆನ್ನೂರು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ 108 ಶಿವಲಿಂಗಗಳ ಬೃಹತ್ ಶೋಭಾ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜಯೋಗಿನಿ ಬ್ರಹ್ಮಾಕುಮಾರಿ ಮಂಜುಳಾಜೀ ತಿಳಿಸಿದರು.

ಮಂಗಳವಾರ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನಾಂಕ 8ರ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಮಲೇಬೆನ್ನೂರಿನ ನೀರಾವರಿ ಇಲಾಖೆ ಆವರಣದಿಂದ ಶೋಭಾಯಾತ್ರೆ ಆರಂಭವಾಗಲಿದೆ.

ಅಲ್ಲಿಂದ ಕೊಮಾರನಹಳ್ಳಿ, ಹಾಲಿವಾಣ, ಹರಳಹಳ್ಳಿ, ಯರಲಬನ್ನಿಕೋಡು, ಮಲ್ಲನಾಯ್ಕನಹಳ್ಳಿ, ನೆಹರು ಕ್ಯಾಂಪ್, ಬೂದಿಹಾಳ್, ಕುಣೆಬೆಳಕೆರೆ, ನಿಟ್ಟೂರು, ಕುಂಬಳೂರು ಮಾರ್ಗವಾಗಿ ಮಧ್ಯಾಹ್ನ 1 ಗಂಟೆಗೆ ಮಲೇಬೆನ್ನೂರಿಗೆ ಆಗಮಿಸಲಿರುವ ಶೋಭಾಯಾತ್ರೆಗೆ ಹೆಲಿಕ್ಯಾಪ್ಟರ್ ಮೂಲಕ ಪುಷ್ಪಾರ್ಚನೆ ಮಾಡಲಾಗುವುದು.ಹೆಲಿಕ್ಯಾಪ್ಟರ್ ಮೂಲಕ ಶಿವಸಂದೇಶ ಸಾರುವ ಕರ ಪತ್ರಗಳನ್ನು ಮಲೇಬೆನ್ನೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹಾಕುವ ಕಾರ್ಯಕ್ರಮವಿದೆ.

ಮಧ್ಯಾಹ್ನ 3 ಗಂಟೆಗೆ ನಂತರ ಶೋಭಾಯಾತ್ರೆಯು ಮಲೇಬೆನ್ನೂರಿನಿಂದ ಜಿಗಳಿ, ಯಲವಟ್ಟಿ, ಲಕ್ಕಶೆಟ್ಟಿಹಳ್ಳಿ, ಹೊಳೆಸಿರಿಗೆರೆ, ಕೆ. ಎನ್. ಹಳ್ಳಿ, ಕೊಕ್ಕನೂರು, ಹಳ್ಳಿಹಾಳ್, ಜಿ. ಬೇವಿನಹಳ್ಳಿ, ವಡೆಯರ ಬಸಾಪುರ ಗ್ರಾಮಗಳಲ್ಲಿ ಸಂಚರಿಸಿ, ಸಂಜೆ 7 ಗಂಟೆ ಸುಮಾರಿಗೆ ಮಲೇಬೆನ್ನೂರಿನ ವೀರಭದ್ರೇಶ್ವರ ದೇವಸ್ಥಾನ ತಲುಪಲಿದ್ದು, ಮಾರ್ಚ್ 22ರವರೆಗೆ ಭಕ್ತರ ದರ್ಶನಕ್ಕಾಗಿ 108 ಶಿವಲಿಂಗಗಳನ್ನು ದೇವಸ್ಥಾನದಲ್ಲಿಯೇ ಇಡಲಾಗುವುದೆಂದು ಅವರು ತಿಳಿಸಿದರು.

ಇದೇ ಮೊದಲ ಬಾರಿಗೆ 108 ಶಿವಲಿಂಗಗಳ ಬೃಹತ್ ಶೋಭಾಯಾತ್ರೆಯನ್ನು ಹಮ್ಮಿಕೊಂಡಿದ್ದೇವೆ. ಅಲ್ಲದೇ ಹೆಲಿಕ್ಯಾಪ್ಟರ್ ಮೂಲಕ ಪುಷ್ಪಾರ್ಚನೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ಮಂಜುಳಾಜೀ ವಿವರಿಸಿದರು.

ಹಿರಿಯರಾದ ಬಿ. ಪಂಚಪ್ಪ, ಜಿಗಳಿ ಇಂದೂಧರ್, ಬಿ.ಕೆ. ದೊಡ್ಡಬಸಣ್ಣ, ಹೆಚ್.ಎಸ್. ವೀರಭದ್ರಯ್ಯ, ಹೆಚ್.ಎಸ್. ರುದ್ರಯ್ಯ ಸುದ್ದಿಗೋಷ್ಠಿಯಲ್ಲಿದ್ದರು.

# ಮುಸ್ಲಿಂ ಸಮುದಾಯದ ಮಕ್ಕಳು ಉರ್ದು ಜೊತೆಗೆ ಕನ್ನಡ ಭಾಷೆಗೆ ಆದ್ಯತೆ ನೀಡಬೇಕು



ಹರಪನಹಳ್ಳಿ, ಮಾ. 5 - ಮುಸ್ಲಿಂ ಸಮುದಾಯದ ಮಕ್ಕಳು ಉರ್ದು ಭಾಷೆಯ ಜೊತೆಗೆ ಕನ್ನಡ ಭಾಷೆಗೆ ಆದ್ಯತೆ ನೀಡಬೇಕು ಎಂದು ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಹಳೇ ಬಸ್ ನಿಲ್ದಾಣದ ಬಳಿಯಿರುವ ಅಂಜುಮನ್ ಶಾದಿಮಹಲ್‌ನಲ್ಲಿ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶನಿವಾರ ನಡೆದ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಸ್ಲಿಂ ಸಮುದಾಯವು ದುಡಿಮೆ ಜೊತೆಗೆ ಶಿಕ್ಷಣಕ್ಕೂ ಆದ್ಯತೆ ನೀಡಬೇಕು. ಸಮುದಾಯದ ಮಕ್ಕಳು ಚನ್ನಾಗಿ ಓದಿ ಮುಂದೆ ಬರಬೇಕು, ಪೋಷಕರಿಗೆ ಒಳ್ಳೆಯ ಹೆಸರು ತರಬೇಕೆಂದು ಸಲಹೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಹಾಗೂ ವರ್ಗಾವಣೆಯಾಗಿ ಬಂದ ಮತ್ತು

**ಹರಪನಹಳ್ಳಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್**

ಹೊಸದಾಗಿ ಸೇವೆಗೆ ಸೇರಿದ ಮುಸ್ಲಿಂ ಸಮುದಾಯದ ನೌಕರರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಬಸವರಾಜ ಸಂಗಪ್ಪನವರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್. ರಾಮಪ್ಪ, ರಾಜ್ಯ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಎಂ. ಷರೀಫ್, ತಾಲ್ಲೂಕು ಅಧ್ಯಕ್ಷ ಪುರಸಭೆ ಸದಸ್ಯರಾದ ಲಾಟಿ ದಾದಾಪೀರ್, ಜಾಕೀರ್ ಹುಸೇನ್, ಕೆ.ಎಸ್. ಉಸ್ಮಾನ್, ಅಂಜುಮಾನ್ ಸಮಿತಿ ಅಧ್ಯಕ್ಷ ಎಂ. ರೆಹಮಾನ್, ಎಂ. ದಾದಾ ಖಲಂದರ್, ರಾಜಶೇಖರ್, ಪದ್ಮಲತಾ, ಚಂದ್ರಮೌಳಿ, ಮನ್ಸೂರ್, ಪದ್ಮರಾಜ್, ಅಂಜಿನಪ್ಪ, ಸಲೀಂ, ಅರ್ಜುಮುನ್ನೀಸಾ, ನಟರಾಜ ಸೇರಿದಂತೆ ಇತರರು ಇದ್ದರು.

## ಕಸಾಪ ವಾರ್ಷಿಕ ಸಾಮಾನ್ಯ ಸಭೆ

ದಾವಣಗೆರೆ, ಮಾ. 5- ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ 107 ನೇ ಹಾಗೂ 2022-23 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಇದೇ ದಿನಾಂಕ 10ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿಹಳ್ಳಿಯಲ್ಲಿರುವ ಶ್ರೀ ರಾಘವೇಂದ್ರ ಜ್ಞಾನ ಮಂದಿರದಲ್ಲಿ ಕೇಂದ್ರ ಕಸಾಪ ಅಧ್ಯಕ್ಷ ಡಾ.ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರುಗಳು ಕಡ್ಡಾಯವಾಗಿ ತಮ್ಮ ಪರಿಷತ್ತಿನ ಗುರುತಿನ ಚೀಟಿ ಅಥವಾ ಪ್ರಜಾ ಪ್ರಾತಿನಿಧ್ಯ ಕಾಯ್ದೆ ಅನ್ವಯ ಸೂಚಿಸಿರುವ ಯಾವುದಾದರೂ ಒಂದು ಗುರುತಿನ ಚೀಟಿಯೊಂದಿಗೆ ಹಾಜರಾಗಿ ಚರ್ಚೆಯಲ್ಲಿ ಭಾಗವಹಿಸಬೇಕು ಎಂದು ಚನ್ನಗಿರಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಲ್.ಜಿ. ಮಧುಕುಮಾರ್ ಮನವಿ ಮಾಡಿದ್ದಾರೆ.

# ಉದ್ಯೋಗಕ್ಕೆ ಇಂಗ್ಲಿಷಿದ್ದರೂ ಮನಸ್ಸು ಕನ್ನಡವಾಗಿರಲಿ

(1ನೇ ಪುಟದಿಂದ) ರಾಜ್ಯ ಸರ್ಕಾರ ವಾಣಿಜ್ಯ ಫಲಕಗಳಲ್ಲಿ ಶೇ.60ರಷ್ಟು ಕನ್ನಡಕ್ಕೆ ಮೀಸಲಿಡಲು ಕಾನೂನು ತಂದಿದೆ. ಅದೇ ರೀತಿ ಕಾರ್ಖಾನೆಗಳಲ್ಲಿ ಶೇ.80-90ರಷ್ಟು ಸ್ಥಾನಗಳು ಕನ್ನಡಿಗರಿಗೆ ಮೀಸಲಿಡಲು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಸಾನ್ನಿಧ್ಯ ವಹಿಸಿದ್ದ ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಮಾತ ನಾಡಿ, ವಚನಕಾರರಿಂದ ಜಾನಪದ ಕಲಾವಿದ ರವರೆಗೆ ಕನ್ನಡದ ಸೇವೆ ಮಾಡಿದ ಪರಂಪರೆ ಇದೆ. ಇಂತಹ ಪರಂಪರೆಯನ್ನು ಉಳಿಸಿ, ಬೆಳೆಸಬೇಕಿದೆ. ಮಕ್ಕಳನ್ನು ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಿದರೂ, ವಚನ, ದಾಸ ಸಾಹಿತ್ಯ ಹಾಗೂ ಜನಪದ ಕಲಿಸಿ ಎಂದು ಕಿವಿಮಾತು ಹೇಳಿದರು.

ನಿಕಟಪೂರ್ವ ತಾಲ್ಲೂಕು ಸಮ್ಮೇಳನಾಧ್ಯಕ್ಷ ಬಿ.ಎನ್. ಮಲ್ಲೇಶ್ ಅವರು ಜಾಹ್ನವಿ ಅವರಿಗೆ ಕನ್ನಡ ಧ್ವಜ ಹಸ್ತಾಂತರಿಸಿದರು.

ಇದಕ್ಕೂ ಮುಂಚೆ ಸಮ್ಮೇಳನದ ಸರ್ವಾಧ್ಯಕ್ಷರ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಹಲವಾರು ಕಲಾ ತಂಡಗಳು ಭಾಗವಹಿಸಿದ್ದವು.

ವೇದಿಕೆಯ ಮೇಲೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ, ತಾಲ್ಲೂಕು ಕ.ಸಾ.ಪ. ಅಧ್ಯಕ್ಷೆ ಸುಮತಿ ಜಯಪ್ಪ, ಜಾನಪದ ವಿದ್ವಾಂಸ ಎಂ.ಜಿ. ಈಶ್ವರಪ್ಪ, ಹೆಬ್ಬಾಳು ಗ್ರಾ.ಪಂ. ಅಧ್ಯಕ್ಷೆ ಹಂಪಮ್ಮ, ಮುಖಂಡರಾದ ಮಹೇಂದ್ರಪ್ಪ, ಮುಜಾಹಿದ್ ಖಾನ್, ನೆಸ್ವಿ ಶಾಂತಪ್ಪ ನರಗನಹಳ್ಳಿ, ರತ್ನಮ್ಮ, ಹೆಚ್.ಪಿ. ಮುರುಗೇಂದ್ರಪ್ಪ ಹೆದ್ನೆ, ಶಿವಾನಂದ ಗುರೂಜಿ, ಶಿವಕುಮಾರ್ ಹೆಬ್ಬಾಳ್, ಹೆಚ್. ಎಸ್. ಮುರುಗೇಂದ್ರಪ್ಪ ಹೊನ್ನನಾಯ್ಕನಹಳ್ಳಿ, ದೊರೆಸ್ವಾಮಿ, ಲೋಕಾಚಾರ್ ಮಣ್ಣೂರ್ ಮತ್ತಿತರರು ಉಪಸ್ಥಿತರಿದ್ದರು.

### ರೈತರ ಮನವಿಯನ್ನೂ ಕೇಳದ ಕೇಂದ್ರ

ರೈತರು ತಮ್ಮ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಕೇಳಿದರೆ ಕೇಂದ್ರ ಸರ್ಕಾರ ಸ್ಪಂದಿಸುತ್ತಿಲ್ಲ. ಹೋರಾಟ ನಡೆಸುತ್ತಿರುವ ರೈತರು ದೆಹಲಿ ಒಳಗೆ ಬರದಂತೆ ತಡೆಯಲಾಗುತ್ತಿದೆ ಎಂದು ಶಾಸಕ ಕೆ. ಎಸ್. ಬಸವಂತಪ್ಪ ಆಕ್ಷೇಪಿಸಿದರು.

ರೈತರ ಅಹವಾಲು ಕೇಳುವ ಸ್ಥಿತಿಯಲ್ಲೂ ಕೇಂದ್ರ ಸರ್ಕಾರ ಇಲ್ಲ. ಸರ್ಕಾರಗಳು ರೈತರ ಪರ ಇರಬೇಕು ಎಂದು ಹೇಳಿದರು.

ಇಡೀ ದೇಶದಲ್ಲಿ ಕರ್ನಾಟಕ ಅತಿ ಹೆಚ್ಚು ತೆರಿಗೆ ಪಾವತಿಸುವ ರಾಜ್ಯಗಳಲ್ಲಿ ಎರಡನೇ ಸ್ಥಾನ ದಲ್ಲಿದೆ. ಆದರೆ, ರಾಜ್ಯಕ್ಕೆ ದಕ್ಕಬೇಕಾದ ಪಾಲು ಕೊಡುತ್ತಿಲ್ಲ ಎಂದೂ ಅವರು ಆಕ್ಷೇಪಿಸಿದರು.

### ಬುದ್ಧನ ಬೆಳಕು, ಬಸವಣ್ಣನ ಕ್ರಾಂತಿ ಬೇಕಿದೆ

ಇಂದಿನ ದಿನಮಾನಗಳು ಪ್ರಕ್ಷುಬ್ಧ, ಅಸಹನೆ ಹಾಗೂ ತಲ್ಲಣಗಳಿಂದ ಕೂಡಿವೆ. ಇವತ್ತೂ ದಲಿತ, ಅಲೆಮಾರಿ, ಬುಡಕಟ್ಟು ಜನರ ಮೇಲೆ ಮತ್ತು ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಬುದ್ಧ, ಬಸವ, ಗಾಂಧಿ ಹಾಗೂ ಅಂಬೇಡ್ಕರ್ ಆದರ್ಶಗಳು ಪ್ರಸ್ತುತವಾಗಿವೆ ಎಂದು ಸಮ್ಮೇಳನಾಧ್ಯಕ್ಷೆ ಬಿ.ಟಿ. ಜಾಹ್ನವಿ ಹೇಳಿದರು.

ಬುದ್ಧನ ಬೆಳಕು, ಬಸವಣ್ಣನ ಕ್ರಾಂತಿ, ಗಾಂಧಿಯ ಮಾನವೀಯತೆ ಹಾಗೂ ಹಾಗೂ ಅಂಬೇಡ್ಕರ್ ಸಮಾನತೆಯ ತತ್ವಗಳನ್ನು ಪಾಲಿಸಬೇಕು ಎಂದು ಹೇಳಿದರು.

## 'ದಾವಣಗೆರೆ ಗೃಹಿಣಿ' ಸ್ಪರ್ಧೆ ಅವಧಿ ವಿಸ್ತರಣೆ

ದಾವಣಗೆರೆ,ಮಾ.5- ನಗರದ ಕಲಾಕುಂಚ ಮಹಿಳಾ ವಿಭಾಗದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ 'ದಾವಣಗೆರೆ ಗೃಹಿಣಿ ಸ್ಪರ್ಧೆ-2024' ಪ್ರವೇಶಕ್ಕೆ ಅವಧಿ ವಿಸ್ತರಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ ತಿಳಿಸಿದ್ದಾರೆ.

ಆಸಕ್ತ ಮಹಿಳೆಯರು ಇದೇ ದಿನಾಂಕ 10ರೊಳಗೆ 9538732777ಕ್ಕೆ ಸಂಪರ್ಕಿಸಿ, ಹೆಸರು ನೋಂದಾಯಿಸಬಹುದು.

## ರಾಣೇಬೆನ್ನೂರು : ಜಿಲ್ಲಾ ಸಾಹಿತ್ಯ ಸಮ್ಮೇಳನದ ಲೆಕ್ಕಪತ್ರ ಸಲ್ಲಿಕೆ



ರಾಣೇಬೆನ್ನೂರು, ಮಾ. 5 - ಫೆ. 11 ಮತ್ತು 12 ರಂದು ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಲೆಕ್ಕಪತ್ರ ಸಲ್ಲಿಸಲಾಗಿದೆ. ಸಮ್ಮೇಳನಕ್ಕಾಗಿ 23.89 ಲಕ್ಷ ಹಣ ಸಂಗ್ರಹಿಸಲಾಗಿದ್ದು, ಎಲ್ಲ ಖರ್ಚು ತೆಗೆದು ಅಂತಿಮವಾಗಿ 2.99 ಲಕ್ಷ ಹಣ ಉಳಿದಿದೆ ಎಂದು ಲೆಕ್ಕಪತ್ರ ಒಪ್ಪಿಸಿದ ಗೌರವಾಧ್ಯಕ್ಷ ಏಕನಾಥ ಭಾನುವಳ್ಳಿ ಅವರು, ಇದುವರೆಗೂ ನಡೆದ 12 ಸಮ್ಮೇಳನದ ಲೆಕ್ಕ ಪತ್ರವನ್ನು ಯಾವ ಸಮಿತಿಯವರು ಒಪ್ಪಿಸಿದ್ದಿಲ್ಲ, ಇದು ನಮ್ಮ ಹೆಗ್ಗಳಿಕೆ ಎಂದು ಅಭಿಪ್ರಾಯಿಸಿದರು.

ಎಲ್ಲ ಸರ್ಕಾರಿ ಅಧಿಕಾರಿಗಳು, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ವೈದ್ಯರು, ಮಹಿಳಾ ಮತ್ತು ವಿವಿಧ ಕನ್ನಡ ಪರ ಸಂಘಟನೆಯವರು, ಪೌರ ಕಾರ್ಮಿಕರು, ವಿದ್ಯಾ ಸಂಸ್ಥೆಗಳು, ಕಸಾಪ ಆಜೀವ ಸದಸ್ಯರು ಈ ದಿಶೆಯಲ್ಲಿ ಸಹಾಯ ಸಹಕಾರ ನೀಡಿ ಸಮ್ಮೇಳನ ಯಶಸ್ವಿಗೊಳಿಸಿದ್ದಕ್ಕೆ ಏಕನಾಥ ಸಂತಸ ವ್ಯಕ್ತಪಡಿಸಿದರು.

ಕಸಾಪ ಭವನದಲ್ಲಿ ನಿನ್ನೆ ನಡೆದ ಲೆಕ್ಕಪತ್ರ ಸಲ್ಲಿಕೆ ಸಭೆಯಲ್ಲಿ ಸಮಿತಿಯ ಪುಟ್ಟಪ್ಪ ಮರಿಯಮ್ಮನವರ, ಎಂ.ಎಸ್. ಅರಕೇರಿ, ಪ್ರಭಾವತಿ ತಿಳವಳ್ಳಿ, ಸರೋಜಿನಿ ಭರಮಗೌಡ್ರ, ಬಿ.ಪಿ. ಶಿಡೇನೂರ, ಪ್ರಕಾಶ ಜೈನ್, ಜಿ.ಜಿ. ಹೊಟ್ಟಿಗೌಡ್ರ, ಜಿಲ್ಲಾಧ್ಯಕ್ಷ ಲಿಂಗಯ್ಯ ಹಿರೇಮಠ, ತಾಲ್ಲೂಕು ಅಧ್ಯಕ್ಷ ಜಂಬಗಿ ವೀರೇಶ, ಇಂದಿರಾ ಬಾರಂಗಿ, ಪ್ರಭಾಕರ ಶಿಗ್ಲಿ ಹಾಗೂ ಡಾ. ಗಣೇಶ ದೇವಗಿರಿಮಠ ಅವರು ಮಾತನಾಡಿದರು.

## ಅಗಸನಕಟ್ಟೆ ಮಾಜಿ ಪ್ರಧಾನರಾದ ಎಸ್. ಶಿವಮೂರ್ತಿ ಅವರ ಸಹೋದರ ಶ್ರೀ ಶಿವಪ್ಪರ ಬಸಪ್ಪ ನಿಧನ



ದಾವಣಗೆರೆ ತಾಲ್ಲೂಕು ಅಗಸನಕಟ್ಟೆ ಗ್ರಾಮದ ವಾಸಿ

**ಶ್ರೀ ಎ.ಎಸ್. ಬಸಪ್ಪನವರು**

ದಿನಾಂಕ 5.3.2024ರ ಮಂಗಳವಾರ ಸಂಜೆ 7.30ಕ್ಕೆ ನಿಧನರಾದರು. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ತಾಯಿ, ಇಬ್ಬರು ಸಹೋದರರು, ಸಹೋದರಿಯರು, ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6.3.2024ರ ಬುಧವಾರ ಮಧ್ಯಾಹ್ನ 2 ಗಂಟೆಗೆ ಅಗಸನಕಟ್ಟೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ಮೊ. 94481-14352, 99011-55938, 98459-81678

॥ ಶ್ರೀ ಉತ್ಸವಾಂಬದೇವಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿ॥ ತಾ॥ ನೇರ್ಲಿಗೆ ಗ್ರಾಮದ ವಾಸಿ

**ಶ್ರೀ ಎನ್.ಜಿ. ಗುರುಸಿದ್ದಪ್ಪ ಮತ್ತು ಸಹೋದರರು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 02.03.2024ನೇ ಶನಿವಾರ ರಾತ್ರಿ 10.40ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಸಿ.ಎಂ. ವಾಗ್ದೇವಿ**

(ದಿ. ಗೌಡ್ರ ಶ್ರೀ ಎನ್.ಜಿ. ರೇವಣಸಿದ್ದಪ್ಪನವರ ಧರ್ಮಪತ್ನಿ)

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 06.03.2024ನೇ ಬುಧವಾರ ಬೆಳಿಗ್ಗೆ 10.30ಕ್ಕೆ ವಿನಾಯಕ ಬಡಾವಣೆ, ವಿದ್ಯಾನಗರ, 3ನೇ ಮೇನ್, 4ನೇ ಕ್ರಾಸ್ ದಾವಣಗೆರೆಯ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಗೌಡ್ರ ವಂಶಸ್ಥರು, ನೇರ್ಲಿಗೆ ಹಾಗೂ ಬಂಧು-ಮಿತ್ರರು. ಮೊ : 95917 47077, 98866 43110

# ಹೊನ್ನಾಳಿ ಪುರಸಭೆ : 23.48 ಲಕ್ಷ ಉಳಿತಾಯ ಬಜೆಟ್



ಹೊನ್ನಾಳಿ, ಮಾ.5- ಶಾಸಕ ಡಿ.ಜಿ.ಶಾಂತನಗೌಡ ಅಧ್ಯಕ್ಷತೆಯಲ್ಲಿ ಹೊನ್ನಾಳಿ ಪುರಸಭೆಯ 2024-25ನೇ ಸಾಲಿನ ಆಯವ್ಯಯವನ್ನು ಆಡಳಿತಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಅಭಿಷೇಕ್ ಅವರು ಪುರಸಭೆ ಸಭಾಂಗಣದಲ್ಲಿ ನಡೆದ ಬಜೆಟ್ ಸಭೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ನಿರಂಜನಿ 23.48 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದ್ದಾರೆ.

ಈ ಸಂದರ್ಭದಲ್ಲಿ ಸದಸ್ಯರಾದ ಸುರೇಶ್, ಬಾಬು, ತಸ್ವೀರ್, ಸಾವಿತ್ರಮ್ಮ, ಇಂಜಿನಿಯರ್ ದೇವರಾಜ್, ಸಿಬ್ಬಂದಿಗಳಾದ ಪರಮೇಶನಾಯ್ಕ, ಮೋಹನ್, ರಾಮಚಂದ್ರಪ್ಪ ಇನ್ನಿತರರಿದ್ದರು.

# ಗೂಗಲ್ ಪ್ಲೇಸ್ಟೋರ್‌ಗೆ ಆಪ್‌ಗಳ ಮರು ಸೇರ್ಪಡೆ

ನವದೆಹಲಿ, ಮಾ. 5 – ಗೂಗಲ್ ಕಂಪನಿಯು ಇತ್ತೀಚೆಗೆ ತನ್ನ ಪ್ಲೇಸ್ಟೋರ್‌ನಿಂದ ಕೈ ಬಿಟ್ಟಿದ್ದ ಎಲ್ಲಾ ಆಪ್‌ಗಳನ್ನು ಮರು ಸೇರ್ಪಡೆ ಮಾಡಲು ಒಪ್ಪಿಕೊಂಡಿದೆ. ಸೇವಾ ಶುಲ್ಕ ಪಾವತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿದ ನಂತರ ಈ ಬೆಳವಣಿಗೆ ಯಾಗಿದೆ. ಗೂಗಲ್ ಹಾಗೂ ನವೋದ್ಯಮ ಆಪ್‌ಗಳ ಜೊತೆ ಕೇಂದ್ರ ಟೆಲಿಕಾಂ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಸಂಧಾನ ನಡೆಸಿದ್ದರು.

ನಂತರ ಮಾತನಾಡಿರುವ ಸಚಿವರು, ಭಾರತದ ತಾಂತ್ರಿಕ ಬೆಳವಣಿಗೆಗೆ ಅಮೆರಿಕದ ಗೂಗಲ್ ಬೆಂಬಲ ನೀಡಲಿದೆ ಎಂದಿದ್ದಾರೆ. ನಾವು ರಚನಾತ್ಮಕ ಚರ್ಚೆಗಳನ್ನು ನಡೆಸಿದ್ದೇವೆ. ಎಲ್ಲಾ ಆಪ್‌ಗಳನ್ನು ಸೇರ್ಪಡೆ ಮಾಡಲು ಗೂಗಲ್ ಸಮ್ಮತಿಸಿದೆ ಎಂದು ಸಚಿವರು ತಿಳಿಸಿದ್ದಾರೆ. ಕಳೆದ ಶುಕ್ರವಾರದಂದು ಗೂಗಲ್ ತನ್ನ ಪ್ಲೇಸ್ಟೋರ್‌ನಿಂದ ಜನಪ್ರಿಯ ವಿವಾಹ ಆಪ್‌ಗಳೂ ಸೇರಿದಂತೆ ಹಲವಾರು ಆಪ್‌ಗಳನ್ನು ತೆಗೆದು ಹಾಕಿತ್ತು. ಗೂಗಲ್ ಕ್ರಮಕ್ಕೆ ಕೇಂದ್ರ ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಶನಿವಾರದಂದು ಗೂಗಲ್ ಹಲವಾರು ಆಪ್‌ಗಳನ್ನು ಮರು ಸೇರ್ಪಡೆ ಮಾಡಿತ್ತು.

# ನಗರದಲ್ಲಿ ಇಂದು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ನಾಳೆ ಎಸ್‌ಎಸ್ ಟ್ರಸ್ಟ್‌ನ ವಾರ್ಷಿಕೋತ್ಸವ

ದಾವಣಗೆರೆ, ಮಾ.5- ಎಸ್.ಎಸ್.ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿ ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ನೇತೃತ್ವದಲ್ಲಿ ಬಿಐಇಟಿ ಕಾಲೇಜ್ ಕ್ಯಾಂಪಸ್‌ನಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ನಾಳೆ 6ರ ಬುಧವಾರ ಬೆಳಗ್ಗೆ 9.30 ಗಂಟೆಗೆ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಮತ್ತು ನಾಡಿದ್ದು 7 ರಂದು ಗುರುವಾರ ಸಂಜೆ 5.30 ಗಂಟೆಗೆ ಎಸ್.ಎಸ್.ಟ್ರಸ್ಟ್‌ನ 5ನೇ ವಾರ್ಷಿಕೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್, ಬಿ.ಇ.ಎ.ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಕಿರುವಾಡಿ ಗಿರಿಜಮ್ಮ, ವಿಶೇಷ ಆಹ್ವಾನಿತರಾಗಿ ಡಾ. ಗಿರಿಜಾ ಬಾಬುಗೌಡ ನಾಡಗೌಡರ್ ಆಗಮಿಸಲಿದ್ದಾರೆ.

ಟ್ರಸ್ಟ್‌ನ ವಾರ್ಷಿಕೋತ್ಸವ ಸಮಾರಂಭವು ಶ್ರೀ ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಜರುಗಲಿದೆ. ಮುಖ್ಯ ಅತಿಥಿಗಳಾಗಿ ನಿವೃತ್ತ ನ್ಯಾಯಮೂರ್ತಿ ಜಸ್ಟಿಸ್ ಶಿವರಾಜ್ ವಿ. ಪಾಟೀಲ್ ಆಗಮಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಪಾಲ್ಗೊಳ್ಳುವರು.

# ಪ್ರಜಾಪ್ರಭುತ್ವ ಹಾಳು ಮಾಡುವವರನ್ನು ಬೆಂಬಲಿಸದಿರಿ : ಎಸ್.ಆರ್. ಹಿರೇಮಠ

ದಾವಣಗೆರೆ, ಮಾ.5- ಮುಂಬರುವ ಲೋಕಸಭೆ ಚುನಾವಣೆಯಲ್ಲಿ ದೇಶದ ಸಂವಿಧಾನ, ಪ್ರಜಾಪ್ರಭುತ್ವ, ಬಹುತ್ವ ಸಂಸ್ಕೃತಿ ಹಾಳು ಮಾಡುವವರನ್ನು ಮತದಾರರು ಬೆಂಬಲಿಸಬಾರದು ಎಂದು ಸಿಟಿಜನ್ ಫಾರ್ ಡೆಮಾಕ್ರಸಿ ಸಂಘಟನೆಯ ಅಧ್ಯಕ್ಷ, ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ ಹೇಳಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮದು ಪಕ್ಷೇತರ ರಾಜಕಾರಣ, ಸಂವಿಧಾನ ಪರ ರಾಜಕಾರಣ. ನಾವು ಇಂತವರಿಗೆ ಮತ ನೀಡಿ ಎಂದು ಹೇಳುವುದಿಲ್ಲ. ಯಾರೂ ಇಷ್ಟವಿಲ್ಲ ಎಂದಾದರೆ ನೋಟಾ ಆಯ್ಕೆಯೂ ಜನರ ಮುಂದಿದೆ. ಆದರೆ ಈ ಬಗ್ಗೆ ಜನರನ್ನು ಜಾಗೃತಗೊಳಿಸಬೇಕಿದೆ. ಜನ ಜಾಗೃತಿಗಾಗಿ 20ಲೋಕಸಭೆ ಕ್ಷೇತ್ರಗಳಲ್ಲಿ ವ್ಯವಸ್ಥಿತವಾಗಿ ಜಾಥಾ ನಡೆಸಲಾಗುವುದು ಎಂದರು.

ಸಿಟಿಜನ್ ಫಾರ್ ಡೆಮಾಕ್ರಸಿ, ಜನಾಂದೋಲನಗಳ ಮಹಾಮೈತ್ರಿ ಮತ್ತು ಇತರೆ ಸಮಾನ ಮನಸ್ಕ ಸಂಘಟನೆಗಳು ಮಾ. 10ರಂದು ಕರೆ ನೀಡಿರುವ ದೆಹಲಿ ಚಲೋ, ರೈಲು ರೋಕೋ ಹೋರಾಟದ ತೀರ್ಮಾನ ಸ್ವಾಗತಾರ್ಹ.

ಕೇಂದ್ರ ಸರ್ಕಾರ ರೈತರ ದಬ್ಬಾಳಿಕೆ ನಡೆ ಅನುಸರಿಸಿವೆ. ಇಂಥ ನಡೆಯನ್ನು ಕೂಡಲೇ ನಿಲ್ಲಿಸಬೇಕು ಎಂದು ಎಸ್.ಆರ್. ಹಿರೇಮಠ ಆಗ್ರಹಿಸಿದರು.

ಜನಾಂದೋಲನಗಳ ಮಹಾಮೈತ್ರಿಯ ಅನೀಷ್ ಪಾಷಾ ಮಾತನಾಡಿ, ರೈತರು, ಕಾರ್ಮಿಕರು, ದುಡಿಯುವ ವರ್ಗದವನ್ನು ಕಡೆಗಣಿಸುವ ಜತೆಗೆ ದೇಶದ ಸಂವಿಧಾನಕ್ಕೂ ಇಂದು ಅಪಾಯ ಎದುರಾಗಿದೆ. ಆದ್ದರಿಂದ ಸಂಘಟನೆ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸಲು ನಿರ್ಧರಿಸಲಾಗಿದೆ ಎಂದರು.

ಜನಾಂದೋಲನ ಮಹಾಮೈತ್ರಿಯ ಪ್ರಮುಖ ಶಿವನಕೆರೆ ಬಸವಲಿಂಗಪ್ಪ, ರೈತ ಸಂಘಟನೆಯ ಬಲ್ಲೂರು ರವಿಕುಮಾರ್, ದಲಿತ ಮುಖಂಡ ಎಚ್. ಮಲ್ಲೇಶ್ ಇನ್ನಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ವನಜಾಕ್ಷಮ್ಮ ನಿಧನ



ದಾವಣಗೆರೆ ಆನೆಕೊಂಡಪೇಟೆ ವಾಸಿ ದಿವಂಗತ ಜಿ.ಬಿ.ಶಿವಪ್ಪನವರ ಪತ್ನಿ ಶ್ರೀಮತಿ ವನಜಾಕ್ಷಮ್ಮ ಇವರು ದಿನಾಂಕ 5.3.2024ರ ಮಂಗಳವಾರ ಮಧ್ಯಾಹ್ನ 3.15ಕ್ಕೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.3.2024ರ ಬುಧವಾರ ಬೆಳಿಗ್ಗೆ 11 ಗಂಟೆಗೆ ನಗರದ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ನಗರದಲ್ಲಿಂದು ಚಿತ್ರಕಲಾ ಪ್ರದರ್ಶನ

ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ವತಿಯಿಂದ ಇಂದು ಬೆಳಿಗ್ಗೆ 10.30ಕ್ಕೆ ಡಯಟ್ ಸಭಾಂಗಣದಲ್ಲಿ ಚಿತ್ರಕಲಾ ಪ್ರದರ್ಶನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಚಿತ್ರಕಲಾ ಪ್ರದರ್ಶನ ಉದ್ಘಾಟಿಸುವರು. ಡಿಡಿಪಿಐ ಜಿ.ಕೊಟ್ರೇಶ್ ಅಧ್ಯಕ್ಷತೆ ವಹಿಸಲಿದ್ದು, ಕಾರ್ಯಕ್ರಮವನ್ನು ಎಸ್ಪಿ ಉಮಾ ಪ್ರಶಾಂತ್ ಉದ್ಘಾಟಿಸಲಿದ್ದಾರೆ. ಚಿತ್ರದುರ್ಗ ಸಿಟಿಇ ಪದನಿಮಿತ್ತ ಜಂಟಿ ನಿರ್ದೇಶಕರಾದ ಲೀಲಾವತಿ ಬಹುಮಾನ ವಿತರಣೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹೆಚ್. ಮಂಜುನಾಥ್, ಹೆಚ್.ಕೆ. ಲಿಂಗರಾಜ್, ಎಸ್. ಗೀತಾ, ಮಂಜುನಾಥ್, ಬಿ.ಜಿ. ಅವುಟಿ, ಪಿ. ನಾಗರಾಜ್, ಪುಷ್ಪಲತಾ, ಹೆಚ್.ಆರ್. ಶೇರ್ ಅಲಿ, ಎಂ. ಹನುಮಂತಪ್ಪ, ಶ್ರೀನಿವಾಸ ಮೂರ್ತಿ, ಸಿದ್ದೇಶಪ್ಪ ಜಿಗಣಪ್ಪರ, ನಾಗಭೂಷಣ ಭಾಗವಹಿಸಲಿದ್ದಾರೆ.

ದಾವಣಗೆರೆ ಸರ್ಕಾರಿ ಪ.ಪೂ. ಕಾಲೇಜು ಪ್ರೌಢಶಾಲಾ ವಿಭಾಗದ ವಿ. ಗುರುಮೂರ್ತಿ, ಮೋತಿ ವೀರಪ್ಪ ಸ.ಪ.ಪೂ. ಕಾಲೇಜಿನ ನಾರಾಯಣ ಪಿ. ಹಡಪದ್ ಇವರಿಗೆ ಜಿಲ್ಲಾ ಚಿತ್ರಕಲಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಜಿಲ್ಲಾ ಪ್ರಶಸ್ತಿ ವಿಜೇತ ಎಂ.ಕೆ. ಪುಂಡಲೀಕ ಅವರನ್ನು ಗೌರವಿಸಲಾಗುವುದು.

KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಓದಿದ ಶಾಲೆಗೆ 10 ಲಕ್ಷ ರೂ. ದೇಣಿಗೆ ನೀಡಿದ ಸಿಎಂ

ಬೆಂಗಳೂರು, ಮಾ. 5 - ಮುಖ್ಯಮಂತ್ರಿ ಸಿದ್ದರಾಮಯ್ಯ ತಾವು ಕಲಿಕೆ ಮಾಡಿದ ಮೈಸೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕುಪ್ಪೆಗಾಲ ಹಾಗೂ ಕೆಪಿಎಸ್ ಸಿದ್ದರಾಮನಹುಂಡಿ ಶಾಲೆಗಳ ಅಭಿವೃದ್ಧಿಗೆ 10 ಲಕ್ಷ ರೂ. ದೇಣಿಗೆ ನೀಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಮೈಸೂರು ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ನಮ್ಮ ಶಾಲೆ, ನಮ್ಮ ಜವಾಬ್ದಾರಿ ಹಾಗೂ ಬಲವರ್ಧನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ ಅವರು, ತಾವು ಶಿಕ್ಷಣ ಪಡೆದ ಶಾಲೆಗಳ ಅಭಿವೃದ್ಧಿಗೆ ಮೊದಲು ದೇಣಿಗೆ ನೀಡಿದ್ದಾರೆ.

ಮುಖ್ಯಮಂತ್ರಿಗಳು ತಾವು ಕಲಿತ ಸಿದ್ದರಾಮನಹುಂಡಿ ಹಾಗೂ ಕುಪ್ಪೆಗಾಲ ಸರ್ಕಾರಿ ಶಾಲೆಯ ಮಕ್ಕಳೊಡನೆ ವಿಡಿಯೋ ಸಂವಾದ ನಡೆಸಿ, ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು, ವೈಚಾರಿಕತೆ, ವೈಜ್ಞಾನಿಕತೆ ಬೆಳೆಸಿಕೊಳ್ಳಬೇಕು, ಜ್ಞಾನದ ವಿಕಾಸವಾಗಬೇಕು ಎಂದು ತಿಳಿಸಿದರು.

ಸಂವಿಧಾನ ಏನು ಹೇಳುತ್ತದೆ ಹೇಳಿ ನೋಡೋಣ ಎಂದು ಮಕ್ಕಳನ್ನು ಕೇಳಿದಾಗ, ಮಕ್ಕಳು ಸಂವಿಧಾನದ ಪೂರ್ವ ಪೀಠಿಕೆಯನ್ನು ಹೇಳಿದರು. ಕೇವಲ ಕಂಠ ಪಾಠ ಮಾಡಿದರೆ ಸಾಲದು, ಅದರ ತಿರುಳನ್ನು ಅರಿತು ಅದರಂತೆ ನಡೆಯಬೇಕು ಎಂದರು.

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಸಂವಿಧಾನದ ತಿರುಳು, ಸಮಾನತೆ, ಸಮಸಮಾಜ ನಿರ್ಮಾಣವಾಗಬೇಕು. ಬುದ್ಧ, ಬಸವ, ಅಂಬೇಡ್ಕರ್ ಅವರು ಇದನ್ನೇ ಹೇಳಿಕೊಂಡು ಬಂದಿದ್ದರಾದರೂ, ಇದು ಪೂರ್ಣವಾಗಿಲ್ಲ, ಇದೆಲ್ಲ ಓದಿ ಅರ್ಥ ಮಾಡಿಕೊಂಡು ಮಕ್ಕಳು ಮನುಷ್ಯತ್ವ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಮಕ್ಕಳಿಗೆ ಕಿವಿಮಾತು ಹೇಳಿದರು.

ಸರ್ಕಾರಿ ಶಾಲೆಗಳಲ್ಲಿ ಕೆಲವು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ, ಶಾಲೆಯ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರ ಉಚಿತ ಶಿಕ್ಷಣ ನೀಡುತ್ತಿದೆ, ಸಂವಿಧಾನ ಜಾರಿಗೆ ಬಂದ ನಂತರ ಉಚಿತ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಿದೆ, ಎಲ್ಲರಿಗೂ ಶಿಕ್ಷಣ ಕಡ್ಡಾಯವಾಗಿದೆ ಎಂದರು.

# ಮಾಧ್ಯಮಗಳು ಸಮಾಜದಲ್ಲಿ ಮೂಢನಂಬಿಕೆಗಳನ್ನು ಬಿತ್ತಬಾರದು




**ಪತ್ರಕರ್ತರ ಸಂಘದ ಕಾರ್ಯಕ್ರಮದಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕಿವಿಮಾತು**

ಬೆಂಗಳೂರು, ಮಾ.5- ಮಾಧ್ಯಮಗಳು ಸಮಾಜಕ್ಕೆ ಮೌಢ್ಯ ಹಾಗೂ ಮೂಢನಂಬಿಕೆಗಳನ್ನು ಬಿತ್ತಬಾರದು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ನಗರದ ಕೆ.ಜಿ.ರಸ್ತೆಯ ಕಂದಾಯ ಭವನದಲ್ಲಿರುವ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಇಂದು ನಡೆದ 'ಮೌಢ್ಯ, ಮೂಢನಂಬಿಕೆ ಮತ್ತು ಮಾಧ್ಯಮ' ವಿಷಯದ ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

ಜನರು ಮಾಧ್ಯಮಗಳಲ್ಲಿ ಬರುವ ಸುದ್ದಿಗಳನ್ನೇ ಸತ್ಯ ಎಂಬುದಾಗಿ ನಂಬುವುದರಿಂದ ಮಾಧ್ಯಮಗಳು ಬಹಳ ಎಚ್ಚರಿಕೆ ವಹಿಸಿ, ಜನಸಾಮಾನ್ಯರಿಗೆ ಸತ್ಯವನ್ನು ಬಿತ್ತರಿಸಬೇಕು ಎಂದು ಸಲಹೆ ನೀಡಿದರು.

ಸಮಾಜದಲ್ಲಿ ಮೌಢ್ಯ, ಕಂದಾಚಾರಗಳೇ ಹೆಚ್ಚುತ್ತಿರುವ ಸನ್ನಿವೇಶದಲ್ಲಿ ದೇಶದ ಮೂಲೆ ಮೂಲೆಯನ್ನು ತಲುಪುವ ಮಾಧ್ಯಮಗಳು ಜನರಿಗೆ ಸಂವಿಧಾನವ ಅರಿವನ್ನು ಮೂಡಿಸಬೇಕು. ಮೂಢನಂಬಿಕೆಗಳಿಂದ ತುಂಬಿರುವ ಸಮಾಜಕ್ಕೆ ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಹೇಳಬೇಕು ಎಂದು ಅವರು ತಿಳಿಸಿದರು.

ಸಂವಿಧಾನ ನಮಗೆ ಮೌಢ್ಯ ಹಾಗೂ ಮೂಢನಂಬಿಕೆಗಳಿಂದ ಮುಕ್ತಗೊಳಿಸುತ್ತದೆ. ಆದುದರಿಂದ ನಾವು ಸಂವಿಧಾನವನ್ನು ಎಲ್ಲರೂ ತಿಳಿದುಕೊಳ್ಳಬೇಕೆನ್ನುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದಿಂದ ಸಂವಿಧಾನ ಜಾಗೃತಿಯಂತಹ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡಿದ್ದೆವು ಎಂದು ಸತೀಶ್ ಜಾರಕಿಹೊಳಿ ಇದೇ ವೇಳೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್ ಸೇರಿ ಹಲವರು ಉಪಸ್ಥಿತರಿದ್ದರು.

## ರಾಣೇಬೆನ್ನೂರು : ಈಶ್ವರಾನಂದ ಶ್ರೀಗಳ ಶಾಶ್ವತ ಮೌನಕ್ಕೆ ಭಕ್ತರಲ್ಲಿ ಶೋಕ



ರಾಣೇಬೆನ್ನೂರು ಮಾ. 5- ತಾಲ್ಲೂಕಿನ ಅಂಕಸಾಪುರ ಗ್ರಾಮದ ಶಿವಾನಂದ ಮಠದ ಈಶ್ವರಾನಂದ ಶ್ರೀಗಳು ಶಾಶ್ವತವಾಗಿ ಮೌನಕ್ಕೆ ಶರಣಾಗಿರುವುದು ಸಾವಿರಾರು ಭಕ್ತರಿಗೆ ದುಃಖವುಂಟು ಮಾಡಿದೆ ಎಂದು ರೈತ ಮುಖಂಡ ಎಫ್. ರವೀಂದ್ರಗೌಡ ಪಾಟೀಲ ಹೇಳಿದರು.

ಮಠದ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೀಗಳು ಮೌನದಿಂದಲೇ ಸಾವಿರಾರು ಭಕ್ತರ ಮನಗೆದ್ದಿದ್ದಾರೆ. ಸದಾ ಭಗವಂತನ ಪೂಜೆಯಲ್ಲಿ ತೊಡಗಿದ ಗುರುಗಳು, ಭಕ್ತರಿಗೆ ಬೆಳ್ಳಿಯಂತಹ ಮಾತುಗಳನ್ನಾಡಿ ಆಶೀರ್ವಚನ ನೀಡುತ್ತಿದ್ದರು ಎಂದರು. ಯಾವುದೇ ಜಾತಿ, ಮತ, ಪಂಥಕ್ಕೆ ಒಳಗಾಗದೇ ಸರ್ವರಿಗೂ ಬೇಕಾಗಿದ್ದರು. ಅಲ್ಪ ಕಾಲಾವಧಿಯಲ್ಲಿ ಮೌನದಿಂದಲೇ ಹೆಚ್ಚು ಸಾಧನೆ ಮಾಡಿದ್ದಾರೆ ಎಂದು ತಿಳಿಸಿದರು.

ಹನುಮಂತಪ್ಪ ವೀನಕಟ್ಟಿ, ಸತೀಶ ಬಡಿಗೇರ, ಲಿಂಗರಾಜ ಮಡಿವಾಳರ, ದಿಳ್ಳೆಪ್ಪ ಸತ್ಯಪ್ಪನವರ, ಚಂದ್ರಣ್ಣ ಬೇಡರ, ಪುಟ್ಟಪ್ಪ ತಳವಾರ, ಸಂಜೀವಪ್ಪ ಗುಡಗೂರು, ಶಿವಪ್ಪ ಲಮಾಣಿ, ಮುಖಂಡರು ಮತ್ತು ವಿವಿಧ ಜಿಲ್ಲೆಗಳ ಭಕ್ತರು ಇದ್ದರು.

## ಪಾಕ್ ಪರ ಘೋಷಣೆಯಿಂದ ಸರ್ಕಾರಕ್ಕೆ ಮುಜುಗರವಾಗಿಲ್ಲ



ಬೆಂಗಳೂರು, ಮಾ. 5 - ರಾಜ್ಯಸಭಾ ಚುನಾವಣಾ ಫಲಿತಾಂಶದ ನಂತರ ವಿಜಯೋತ್ಸವ ಸಂದರ್ಭದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂದಿರುವುದು ಸರ್ಕಾರಕ್ಕೆ ಮುಜುಗರ ತಂದಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸರ್ಕಾರ ಈ ರೀತಿ ಕೂಗಲು ಯಾರನ್ನೂ ಪ್ರಚೋದಿಸಿಲ್ಲ, ಅವನ್ಯಾರೋ ಬಂದಿದ್ದಾನೆ, ಕೂಗಿದ್ದಾನೆ, ಅವರನ್ನು ಬಂಧಿಸಿದ್ದೇವೆ ಎಂದು ಪತ್ರಕರ್ತರೊಂದಿಗೆ ಮಾತನಾಡಿದ ಪರಮೇಶ್ವರ್ ಹೇಳಿದ್ದಾರೆ.

ಇದುವರೆಗೂ ಆತ ಕೂಗಿರುವುದರ ಬಗ್ಗೆ ಖಚಿತ ಪಡಿಸಿ ಕೊಳ್ಳಲು ಕಾಯುತ್ತಿದ್ದೆವು, ಮಾಹಿತಿ ಖಚಿತವಾಗುತ್ತಿದ್ದಂತೆ, ಆರೋಪಿಗಳನ್ನು ಬಂಧಿಸಿದ್ದೇವೆ ಎಂದರು.

ಸರ್ಕಾರಕ್ಕೆ ಮುಜುಗರ ಆಗುವಂತಹದ್ದು ಏನೂ ಮಾಡಿಲ್ಲ. ತಪ್ಪಿತಸ್ಥರ ವಿರುದ್ಧ ಮುಲಾಜಿಲ್ಲದೆ ಕ್ರಮ ತೆಗೆದುಕೊಂಡು ಒಳ್ಳೆಯ ಕೆಲಸ ಮಾಡಿದೆ. ಇದಕ್ಕೆ ಸರ್ಕಾರವನ್ನು ಪ್ರಶಂಶಿಸಬೇಕು. ವಿಧಾನಸೌಧದ ಭದ್ರತಾ ವೈಫಲ್ಯ ಕಂಡು ಬಂದರೆ ಇಲಾಖಾ ಅಧಿಕಾರಿಗಳು ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತಾರೆ. ಯಾರನ್ನೋ ಕೇಳಿ ಕೆಲಸ ಮಾಡುವ ಅಗತ್ಯತೆ ಇಲ್ಲ ಎಂದರು. ಪಾಕಿಸ್ತಾನ ಪರ ಘೋಷಣೆ ಕೂಗಿದ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖೆಯ ಅಧಿಕೃತ ಎಫ್‌ಎಸ್‌ಎಲ್ ವರದಿಯನ್ನು ಆಧಾರವಾಗಿಟ್ಟುಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪರಮೇಶ್ವರ್ ಹೇಳಿದರು.

ಖಾಸಗಿಯವರೂ ಎಫ್‌ಎಸ್‌ಎಲ್ ವರದಿ ಬಿಡುಗಡೆ ಮಾಡಿದ್ದರು. ನಾವು ಅದನ್ನು ಅಧಿಕೃತ ಎಂದು ಪರಿಗಣಿಸುವುದಿಲ್ಲ. ಖಾಸಗಿಯವರಿಗೆ ಯಾವುದೇ ರೀತಿಯ ಮಾನ್ಯತೆ ನೀಡಿಲ್ಲ. ನಮ್ಮ ಇಲಾಖೆಯ ಎಫ್‌ಎಸ್‌ಎಲ್ ವರದಿಯಲ್ಲಿ ಆರೋಪಿಗಳು ಪಾಕಿಸ್ತಾನ ಪರ ಘೋಷಣೆ ಕೂಗಿರುವುದು ಖಚಿತವಾಗಿದೆ. ಈ ಆಧಾರದ ಮೇಲೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

# ರೇವಣಸಿದ್ದೇಶ್ವರ, ಬೀರದೇವರ ಸಂಬಂಧ ಅನನ್ಯವಾದದ್ದು



**ಮಲೇಬೆನ್ನೂರಿನಲ್ಲಿ ರಂಭಾಪುರಿ ಜಗದ್ಗುರುಗಳು**

ಮಲೇಬೆನ್ನೂರು, ಮಾ. 5- ರಂಭಾಪುರಿ ಶ್ರೀಗಳು, ರೇವಣಸಿದ್ದೇಶ್ವರರು ಮತ್ತು ಬೀರಲಿಂಗೇಶ್ವರ ದೇವರಿಗೂ ಇರುವ ಸಂಬಂಧ ಬಹಳ ಅನನ್ಯ ಎಂದು ಬಾಳೆಹೊನ್ನೂರಿನ ರಂಭಾಪೂರಿ ಪೀಠದ ಶ್ರೀ ಡಾ. ವೀರಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ ಸಂತಸ ವ್ಯಕ್ತಪಡಿಸಿದರು.

ಇಲ್ಲಿನ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಏರ್ಪಾಡಾಗಿದ್ದ ಬೀರದೇವರಿಗೆ ಅಭಿಷೇಕ ಪೂಜೆ ಮತ್ತು ಇಷ್ಟಲಿಂಗ ಮಹಾಪೂಜೆಯನ್ನು ನೆರವೇರಿಸಿ ನಂತರ ಜಗದ್ಗುರುಗಳು ಆಶೀರ್ವಚನ ನೀಡಿದರು.

ರಂಭಾಪುರಿ ಜಗದ್ಗುರುಗಳು ಎಲ್ಲೇ ಬರಲಿ ಅಲ್ಲಿಗೆ ಬೀರದೇವರು ಆಗಮಿಸಿ, ಗೌರವ ಸಮರ್ಪಿಸುವ ಪದ್ಧತಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ದೈವ ಶಕ್ತಿ ಬಹಳ ದೊಡ್ಡದು ಎಂಬುದಕ್ಕೆ ಈ ದಿನ ಸಾಕ್ಷಿ ಆಗಿದ್ದು, ದೇವಿ ವಾರ ಹಾಗೂ ವೀರಭದ್ರೇಶ್ವರ ದೇವರ ವಾರದ ದಿನದಂದೇ ಬೀರಪ್ಪನಿಗೆ ಅಭಿಷೇಕ ಆಗಬೇಕೆಂಬ ಸಂಕಲ್ಪ ಆಗಿತ್ತು. ಆ ಪ್ರಕಾರ ನಾವು ಇಲ್ಲಿಗೆ ಆಗಮಿಸಿ, ಅಭಿಷೇಕ ಪೂಜೆ ಹಾಗೂ ಇಷ್ಟಲಿಂಗ ಪೂಜೆಯನ್ನು ನೆರವೇರಿಸಿರುವುದು ನಮಗೂ ಆತ್ಮ ಸಂತೃಪ್ತಿ ತಂದಿದೆ ಎಂದು ರಂಭಾಪುರಿ ಶ್ರೀಗಳು ಹೇಳಿದರು.

ಮನುಷ್ಯ ಕೊಟ್ಟಿದ್ದು ಮನೆ ತನಕ, ದೇವರು ಕೊಟ್ಟಿದ್ದು ಕೊನೆತನಕ ಎಂಬುದನ್ನು ಯಾರೂ ಮರೆಯಬಾರದು. ಅಂತಹ ದೇವರನ್ನು ನಂಬದ ನಾಸ್ತಿಕರು ಅತಿಯಾದ ವೈಚಾರಿಕತೆಯನ್ನು ಬೆಳೆಸಿಕೊಂಡು ಮಾನಸಿಕ ನೆಮ್ಮದಿ ಕಳೆದುಕೊಂಡಿದ್ದಾರೆ. ಶಿವ ಮತ್ತು ಶಕ್ತಿ ಎರಡು ಒಂದಾಗಿ ನಮ್ಮನ್ನು ಕಾಪಾಡುತ್ತಾ ಬಂದಿವೆ. ವೀರಶೈವ ಧರ್ಮದಲ್ಲಿ ಗುರು ಕೊಟ್ಟ ಇಷ್ಟಲಿಂಗ ಪೂಜೆಯಿಂದ ಎಲ್ಲಾ ಸಂಕಷ್ಟಗಳು ದೂರವಾಗಿ ಭಕ್ತರ ಇಷ್ಟಾರ್ಥಗಳು ಈಡೇರುತ್ತವೆ ಎಂಬ ನಂಬಿಕೆ ಮೊದಲಿನಿಂದಲೂ ಇದೆ. ಆ ಕಾರಣಕ್ಕಾಗಿಯೇ ವೀರಗಂಗಾಧರ ಜಗದ್ಗುರುಗಳ ಕಾಲದಿಂದಲೂ ಇಷ್ಟಲಿಂಗ ಪೂಜೆಯನ್ನು ನಾಡಿನ ಒಳಿತಿಗಾಗಿ ಮತ್ತು ಭಕ್ತರ ಉದ್ಧಾರಕ್ಕಾಗಿ ಮಾಡುತ್ತಾ ಬಂದಿದ್ದೇವೆ ಎಂದರು.

ಈ ವರ್ಷ ನಾಡಿನಲ್ಲಿ ಮಳೆ-ಬೆಳೆ ಸಮೃದ್ಧಿಸಲಿ ಮತ್ತು ರೈತರು ಸಂತುಷ್ಟಿಗೊಳ್ಳಲಿ ಎಂದು ಪ್ರಾರ್ಥಿಸಿದ ರಂಭಾಪುರಿ ಶ್ರೀಗಳು, ಹಾಲುಮತ ಸಮಾಜದವರು ಹೊಡೆಯುವ ಡೊಳ್ಳಿನ ಶಬ್ಧ ಮೊದಲಿಗೆ ರೇವಣಸಿದ್ದೇಶ್ವರರಿಗೆ ಕೇಳುತ್ತದೆ ಎಂಬ ನಂಬಿಕೆ ಇದ್ದು, ಹಾಗಾಗಿ ಡೊಳ್ಳಿನ ಕುಣಿತದಲ್ಲಿ ಭಕ್ತಿ-ಉತ್ಸಾಹ ಇರುತ್ತದೆ ಎಂದರು.

ಈ ಸಮಾಜದ ಹಿರಿಯ ಮುತ್ಸದ್ಧಿ ಕೆ.ಪಿ. ಸಿದ್ದಬಸಪ್ಪನವರು ರಾಜಕಾರಣಿಯಾಗಿದ್ದರೂ ಧರ್ಮದ ಕಾರ್ಯಗಳಲ್ಲಿ ಹೆಚ್ಚು ತಮ್ಮನ್ನು ತಾವು ತೊಡಗಿಸಿಕೊಂಡು ಎಲ್ಲರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದು ಶ್ರೀಗಳು ಸ್ಮರಿಸಿದರು.

ರಟ್ಟಿಹಳ್ಳಿ ಕಬ್ಬಿಣಕಂಥಿಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿ, ಬೀರದೇವರು ಸಂಸ್ಕೃತಿಯ ಪ್ರತೀಕವಾಗಿದ್ದು, ಅತ್ಯಂತ ಶಕ್ತಿ-ಭಕ್ತಿ ಹೊಂದಿದ್ದಾರೆ ಎಂಬುದಕ್ಕೆ ರಂಭಾಪುರಿ ಶ್ರೀಗಳು ಇಲ್ಲಿಗೆ ಬಂದಿರುವುದೇ ಸಾಕ್ಷಿ ಎಂದರು.

ಪಟ್ಟಣದ ಹುಲಿಕಂಥಿಮಠದ ಶ್ರೀ ರೇವಣಸಿದ್ದಯ್ಯ ಸ್ವಾಮೀಜಿ, ಬೀರಲಿಂಗೇಶ್ವರ ವಿದ್ಯಾಸಂಸ್ಥೆಯ ಅಧ್ಯಕ್ಷ ಪೂಜಾರ್ ಬಸಪ್ಪ, ದೇವಸ್ಥಾನದ ಅಧ್ಯಕ್ಷ ಪೂಜಾರ್ ನಾಗಪ್ಪ, ಗೌರವಾಧ್ಯಕ್ಷ ಪೂಜಾರ್ ರೇವಣಪ್ಪ, ಹರಿಹರ ತಾ. ಕುರುಬ ಸಮಾಜದ ಅಧ್ಯಕ್ಷ ಪೂಜಾರ್ ಹಾಲೇಶಪ್ಪ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶಸ್ವಾಮಿ, ನಂದಿ ಬ್ಯಾಂಕ್ ಮಾಜಿ ಅಧ್ಯಕ್ಷ ಜಿಗಳಿ ಇಂದೂಧರ್, ಪೂಜಾರ್ ನಿಂಗಪ್ಪ, ಪಿ.ಬಿ. ಜಯ್ಯಪ್ಪ, ಪಿ.ಬಿ. ಬೀರಪ್ಪ, ಪಿ. ಗಂಗೆನೆಳ್ಳಪ್ಪ, ಕೆ.ಪಿ. ಸೋಮಶೇಖರ್, ಪಿ.ಹೆಚ್. ಶಿವಕುಮಾರ್, ಭಾನುವಳ್ಳಿ ಸುರೇಶ್, ಭೋವಿಕುಮಾರ್, ಬಿ. ಚಂದ್ರಪ್ಪ, ಪೂಜಾರ್ ಮಹೇಶ್, ಉಪನ್ಯಾಸಕ ಹಾಲೇಶ್, ಉದ್ಯಮಿ ಬಿ. ಮಲ್ಲಿಕಾರ್ಜುನ್, ಬಿ. ಉಮಾಶಂಕರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ದೇವಸ್ಥಾನದ ಕಾರ್ಯದರ್ಶಿ ಕೆ.ಪಿ. ಗಂಗಾಧರ್ ಸ್ವಾಗತಿಸಿದರು. ಪುರಸಭೆ ಮಾಜಿ ಸದಸ್ಯ ಪಿ.ಆರ್. ರಾಜು ವಂದಿಸಿದರು.

## ಭಾರತ ದೇಶವೇ ಅಲ್ಲ ಎಂದ ಡಿಎಂಕೆ ಸಂಸದ

ನವದೆಹಲಿ, ಮಾ. 5 – ಭಾರತ ಒಂದು ದೇಶವೇ ಅಲ್ಲ ಎಂದು ಡಿ.ಎಂ.ಕೆ. ನಾಯಕ ಹಾಗೂ ಸಂಸದ ಎ. ರಾಜಾ ಹೇಳಿಕೆ ನೀಡಿರುವ ವಿಡಿಯೋ ಒಂದು ಬೆಳಕಿಗೆ ಬಂದಿದೆ. ಭಾರತ ಒಂದೇ ದೇಶವೇ ಅಲ್ಲ ಭಾರತ ಉಪಖಂಡ.

ತಮಿಳುನಾಡು, ಒಡಿಶಾ, ಕೇರಳ, ದೆಹಲಿ.. ಹೀಗೆ ರಾಜ್ಯಗಳೆಲ್ಲ ಪ್ರತ್ಯೇಕ ದೇಶಗಳು ಎಂದು ರಾಜಾ ಹೇಳಿರುವುದು ವಿಡಿಯೋದಲ್ಲಿದೆ.

ಡಿ.ಎಂ.ಕೆ. ಆಯೋಜಿಸಿದ್ದ ಸಮಾರಂಭವೊಂದರಲ್ಲಿ ಮಾತನಾಡಿರುವ ರಾಜಾ, ಭಾರತ ದೇಶವೇ ಅಲ್ಲ. ಭಾರತ ಎಂದೂ ಒಂದು ದೇಶವಾಗಿರಲಿಲ್ಲ. ಒಂದೇ ಭಾಷೆ, ಒಂದೇ ಸಂಪ್ರದಾಯ ಹಾಗೂ ಒಂದೇ ಸಂಸ್ಕೃತಿ ಇದ್ದರೆ ಮಾತ್ರ ಅದು ದೇಶವಾಗುತ್ತದೆ ಎಂದು ಪ್ರತಿಪಾದಿಸಿದ್ದಾರೆ. ಕೇರಳದಲ್ಲಿ ಒಂದು ಸಂಸ್ಕೃತಿ ಇದೆ, ದೆಹಲಿಯಲ್ಲಿ ಮತ್ತೊಂದು ಸಂಸ್ಕೃತಿ ಇದೆ. ಒರಿಸ್ಸಾದಲ್ಲಿ ಮತ್ತೊಂದು ಸಂಸ್ಕೃತಿ ಇದೆ. ಮಣಿಪುರದಲ್ಲಿ ನಾಯಿ ತಿನ್ನುತ್ತಾರೆ. ಅದು ಅವರ ಸಂಸ್ಕೃತಿ ಎಂದು ಸಂಸದ ರಾಜಾ ಹೇಳಿದ್ದಾರೆ.

ಈ ಬಗ್ಗೆ ತೀವ್ರವಾಗಿ ಆಕ್ಷೇಪಿಸಿರುವ ಬಿಜೆಪಿ ಐ.ಟಿ. ವಿಭಾಗದ ಉಸ್ತುವಾರಿ ಅಮಿತ್ ಮಾಳವೀಯ, ಡಿ.ಎಂ.ಕೆ. ಪಕ್ಷದ ಕಡೆಯಿಂದ ನಿರಂತರವಾಗಿ ದ್ವೇಷ ಭಾಷಣ ಹರಿದು ಬರುತ್ತಿದೆ. ಈ ಹಿಂದೆ ಡಿ.ಎಂ.ಕೆ. ನಾಯಕ ಹಾಗೂ ಸಚಿವ ಉದಯನಿಧಿ ಸ್ಟಾಲಿನ್ ಸನಾತನ ಧರ್ಮದ ನಿರ್ಮೂಲನೆಗೆ ಕರೆ ನೀಡಿದ್ದರು. ಈಗ ಎ. ರಾಜ ಭಾರತವನ್ನು ಒಡೆಯುವ ಮಾತನಾಡುತ್ತಿದ್ದಾರೆ ಎಂದಿದ್ದಾರೆ.

## ವಿವಿಧ ಕೋರ್ಸ್‌ಗಳಿಗೆ ಉದ್ಯೋಗಾಧಾರಿತ ತರಬೇತಿ

ಹರಿಹರ, ಮಾ. 5 - ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಸಂಸ್ಥೆಯಲ್ಲಿ ಎಸ್.ಸಿ.ಪಿ, ಟಿ.ಎಸ್.ಪಿ. ಯೋಜನೆಯಡಿ ಎಸ್ಸಿ, ಎಸ್ಟಿ ಯುವಕ, ಯುವತಿಯರಿಗೆ ಶಿಷ್ಯವೇತನದೊಂದಿಗೆ ವಿವಿಧ ಕೋರ್ಸ್‌ಗಳಲ್ಲಿ ಉಚಿತ ತರಬೇತಿ ನೀಡಲಾಗುತ್ತದೆ.

ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಐಟಿಐ, ಡಿಪ್ಲೋಮಾ, ಬಿ.ಇ. ಮತ್ತು ಯಾವುದೇ ಪದವಿ ಪಾಸ್ ಆಗಿರುವ ಅಭ್ಯರ್ಥಿಗಳಿಗೆ ಆಟೋಮೇಷನ್ ಕಂಟ್ರೋಲ್, ಇಂಟರ್‌ನೆಟ್ ಆಫ್ ಥಿಂಗ್ಸ್, ರಿವರ್ಸ್ ಇಂಜಿನಿಯರಿಂಗ್, 3ಡಿ ಪ್ರಿಂಟಿಂಗ್, ವ್ಯಾಲಿಡೇಷನ್ ಲ್ಯಾಬ್, ರಿಯಾಲಿಟಿ ಲ್ಯಾಬ್, ಪ್ರೊಡಕ್ಟ್ ಡಿಸೈನ್ ಅಂಡ್ ಡೆವಲಪ್ ಮೆಂಟ್, ಸಿ.ಎನ್.ಸಿ ಮಿಲ್ಲಿಂಗ್ ಮಷಿನ್ ಆಪರೇಟರ್. ಸಿ.ಎನ್.ಸಿ ಪ್ರೋಗ್ರಾಮಿಂಗ್, ಆಪರೇಷನ್, ಟರ್ನರ್, ಮಿಲ್ಲರ್, ಗ್ರೈಂಡರ್, ಡಿಸೈನರ್-ಮೆಕ್ಯಾನಿಕಲ್, ಪ್ರೊಡಕ್ಷನ್ ಇಂಜಿನಿಯರ್, ಟೂಲ್ ರೂಮ್ ಮಷಿನಿಷ್ಟ್ ಕೋರ್ಸ್‌ಗಳಿಗೆ ತರಬೇತಿ ನೀಡಲಾಗುವುದು.

ವಿವರಕ್ಕೆ ಸಂಪರ್ಕಿಸಿ : ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ. ಕೆಐಎಡಿಬಿ, ಇಂಡಸ್ಟ್ರಿಯಲ್ ಏರಿಯಾ ಹರ್ಲಾಪುರ, ಕೆ.ಎಸ್.ಆರ್.ಟಿ.ಸಿ ಡಿಪೋ ಹತ್ತಿರ ಹರಿಹರ, ಮೊ. 90353729971, 9611025932, 8884488202.

## ಶೇಖ್ ಪ್ರಕರಣದಲ್ಲಿ ಪೊಲೀಸರು ಪಕ್ಷಪಾತಿ

### ಸಿ.ಬಿ.ಐ.ಗೆ ಪ್ರಕರಣ ಹಸ್ತಾಂತರಿಸಲು ಹೈಕೋರ್ಟ್ ಆದೇಶ

ನವದೆಹಲಿ, ಮಾ. 5 – ಪಶ್ಚಿಮ ಬಂಗಾಳ ಪೊಲೀಸರು ಟಿ.ಎಂ.ಸಿ. ನಾಯಕ ಶಾಜಹಾನ್ ಶೇಖ್ ಪ್ರಕರಣದಲ್ಲಿ ಸಂಪೂರ್ಣ ಪಕ್ಷಪಾತಿಯಾಗಿ ವರ್ತಿಸಿದ್ದಾರೆ. ಶೇಖ್ ರಕ್ಷಿಸುವ ಸಲುವಾಗಿ ತನಿಖೆ ವಿಳಂಬ ಮಾಡುವ ಪ್ರಯತ್ನ ನಡೆಸಿದ್ದಾರೆ ಎಂದು ಕಲ್ಕತ್ತಾ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಸಂದೇಶ್‌ಖಾಲಿಯಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಮೇಲೆ ನಡೆದ ಹಲ್ಲೆ ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಬೇಕು ಹಾಗೂ ಆರೋಪಿ ಶೇಖ್‌ನನ್ನು ಸಿ.ಬಿ.ಐ.ಗೆ ಹಸ್ತಾಂತರಿಸಬೇಕು ಎಂದೂ ಹೈಕೋರ್ಟ್ ತಿಳಿಸಿದೆ.

ಹೈಕೋರ್ಟ್ ಆದೇಶದ ನಂತರ ಸಿ.ಬಿ.ಐ. ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದೆ. ಆದರೆ, ಪಶ್ಚಿಮ ಬಂಗಾಳದ ಪೊಲೀಸರು ಆರೋಪಿಯನ್ನು ಸಿ.ಬಿ.ಐ.ಗೆ ಹಸ್ತಾಂತರಿಸಲು ನಿರಾಕರಿಸಿದ್ದಾರೆ.

ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿರುವ ಕಾರಣ, ಆರೋಪಿಯನ್ನು ಹಸ್ತಾಂತರಿಸುವುದಾಗಿಲ್ಲ ಎಂದು ಪೊಲೀಸರು ಹೇಳಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆಯಲು ಸಿ.ಐ.ಡಿ. ಕೇಂದ್ರ ಕಚೇರಿಗೆ ತೆರಳಿದ್ದ ಸಿ.ಬಿ.ಐ. ತಂಡ, ಎರಡು ಗಂಟೆ ಕಾದ ನಂತರ ಬರಿಗೈಯ್ಯಲ್ಲಿ ಮರಳಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಸರ್ಕಾರದ ಪರವಾಗಿ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ತ್ವರಿತ ವಿಚಾರಣೆಗೆ ನಿರಾಕರಿಸಿರುವ ಸುಪ್ರೀಂ ಕೋರ್ಟ್, ಈ ವಿಷಯವನ್ನು ರಿಜಿಸ್ಟ್ರಾರ್ ಜನರಲ್ ಬಳಿ ದಾಖಲಿಸುವಂತೆ ತಿಳಿಸಿದೆ. ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜನವರಿ 5ರಂದು ಶೇಖ್ ನಿವಾಸದ ಮೇಲೆ ದಾಳಿ ನಡೆಸಲು ಜಾರಿ ನಿರ್ದೇಶನಾಲಯದ ತಂಡ ತೆರಳಿತ್ತು. ಆ ಸಂದರ್ಭದಲ್ಲಿ ತಂಡದ ಮೇಲೆ ದಾಳಿ ನಡೆಸಲಾಗಿತ್ತು.

## ಜಗಳೂರು : ಉತ್ತಮ ಇಳುವರಿಗೆ ಗುಣಮಟ್ಟದ ಬೀಜ ಬಳಸಲು ಸಲಹೆ

ಜಗಳೂರು ಮಾ. 5- ಈರುಳ್ಳಿ ಬೆಳೆಗಾರಿಕೆಯಲ್ಲಿ ಗುಣಮಟ್ಟದ ಬೀಜ ಬಳಸಿದಲ್ಲಿ ಉತ್ತಮ ಇಳುವರಿ ಪಡೆಯಲು ಸಾಧ್ಯ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಸಲಹೆ ನೀಡಿದರು.

ತಾಲ್ಲೂಕಿನ ನಿಬಗೂರು ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರವು ಇತ್ತೀಚೆಗೆ ಹಮ್ಮಿಕೊಂಡಿದ್ದ 'ಈರುಳ್ಳಿ ಬೆಳೆಯ ಕ್ಷೇತ್ರ ಪ್ರಯೋಗದ ಕ್ಷೇತ್ರೋತ್ಸವ'ದಲ್ಲಿ ಮಾತನಾಡಿದರು.

ಭೀಮಾ ರೆಡ್, ಭೀಮಾ ಶಕ್ತಿ, ಎಎಫ್‌ಎಲ್‌ಆರ್ ತಳಿಗಳನ್ನು ರೈತರಿಗೆ ಪರಿಚಯಿಸಲಾಗಿದ್ದು, ಇದನ್ನು ಬಳಸಿದ ರೈತರ ತಾಕುಗಳಲ್ಲಿ ಉತ್ತಮ ಬೆಳೆ ಬಂದಿದೆ ಎಂದು ತಿಳಿಸಿದರು. ಸಮಗ್ರ ಪೋಷಕಾಂಶಗಳ ಜತೆಗೆ ರೋಗ ಹಾಗೂ ಕೀಟಗಳ ನಿರ್ವಹಣೆ ಮಾಡುವುದರಿಂದ ಉತ್ತಮ ಗಡ್ಡೆ ಕಟ್ಟುತ್ತದೆ. ಇದರಿಂದ ರೈತರು ಗಡ್ಡೆಗಳ ವರ್ಗೀಕರಣ ಮಾಡಿ ಮಾರಾಟ ಮಾಡಿದಾಗ ಉತ್ತಮ ಬೆಲೆ ಪಡೆಯಬಹುದು ಎಂದರು. ಮೂರು ತಳಿಗಳ ಪೈಕಿ ಭೀಮಾ ರೆಡ್ ತಳಿಯು ಉತ್ತಮ ಗಡ್ಡೆ ಕಟ್ಟಿದ್ದು, ಬೇಸಿಗೆಯಲ್ಲಿ ಬೆಳೆಯಲು ಯೋಗ್ಯವಾಗಿದೆ ಎಂದು ಹೇಳಿದರು. ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್ ಮಾತನಾಡಿದರು.

ರೈತ ಉತ್ಪಾದಕ ಕಂಪನಿ ಉಪಾಧ್ಯಕ್ಷ ಸೋಮನಗೌಡ, ನಿರ್ದೇಶಕ ರೇವಣ್ಣ, ಕೃಷ್ಣಮೂರ್ತಿ, ಬಸವನಗೌಡ್ರು, ಸಿಬ್ಬಂದಿಗಳಾದ ಆದರ್ಶ್, ಸುರೇಶ್, ರೈತರಾದ ನಾಗರಾಜ್, ಗುರುಸಿದ್ದನಗೌಡ ಇತರರು ಇದ್ದರು.

## ಪಾಕ್ ಪರ ಘೋಷಣೆ : ಕಾಂಗ್ರೆಸ್ ನಾಯಕರು ಮೂಕ ಪ್ರೇಕ್ಷಕರೆಂದು ನಡ್ಡಾ ತರಾಟೆ

ಚಿಕ್ಕೋಡಿ, ಮಾ. 5 – ವಿಧಾನಸೌಧದಲ್ಲಿ ಪಾಕಿಸ್ತಾನದ ಪರ ಘೋಷಣೆ ಕೇಳಿ ಬಂದಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೂಕ ಪ್ರೇಕ್ಷಕರಾಗಿದ್ದಾರೆ ಎಂದು ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ತರಾಟೆಗೆ ತೆಗೆದುಕೊಂಡಿದ್ದಾರೆ.

ಚಿಕ್ಕೋಡಿಯಲ್ಲಿ ಬೂತ್ ಹಂತದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಪಾಕಿಸ್ತಾನ್ ಜಿಂದಾಬಾದ್' ಎಂದು ಘೋಷಣೆ ಕೂಗಿದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮೌನ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೌನ, ಕರ್ನಾಟಕದವರೇ ಆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮೌನ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮೌನ. ಇವರೆಲ್ಲರೂ ಏಕೆ ಮೌನವಾಗಿದ್ದಾರೆ? ಇವರೇನು ಪಾಕಿಸ್ತಾನದವರಾ? ಎಂದು ಪ್ರಶ್ನಿಸಿದ್ದಾರೆ.

ಸಿದ್ಧರಾಮಯ್ಯ ಅವರ ಸರ್ಕಾರ ರಾಜ್ಯದ ಜನರಿಗೆ ಗ್ಯಾರಂಟಿಗಳ ಜತೆಗೆ ಉಚಿತವಾಗಿ ಭಯೋತ್ಪಾದನೆಯನ್ನೂ ನೀಡುತ್ತಿದೆ. ಇಂಥವರನ್ನು ಭಾರತ ಮಾತೆ ಎಂದಿಗೂ ಕ್ಷಮಿಸುವುದಿಲ್ಲ ಎಂದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾರತ್ ಜೋಡೋ ಯಾತ್ರೆ ನಡೆಸುತ್ತಿದ್ದಾರೆ. ಭಾರತವನ್ನು ಈ ರೀತಿ ಒಗ್ಗೂಡಿಸಲಾಗುತ್ತಿದೆಯೇ? ನಿಮ್ಮ ಸಂಸದ ಚುನಾವಣೆಯಲ್ಲಿ ಗೆದ್ದಾಗ ಪಾಕಿಸ್ತಾನದ ಪರ ಘೋಷಣೆ ಕೂಗಲಾಗುತ್ತದೆ.

ನೀವು ಯಾರನ್ನು ಪ್ರತಿನಿಧಿಸುತ್ತಿದ್ದೀರಿ? ನೀವು ಪಾಕಿಸ್ತಾನಕ್ಕೆ ನೆರವಾಗಲು ಹುಟ್ಟಿದ್ದೀರಾ? ನೀವು ಭಾರತದಲ್ಲಿ ಪಾಕಿಸ್ತಾನವನ್ನು ಪ್ರತಿನಿಧಿಸುತ್ತಿದ್ದೀರ? ಇದಕ್ಕೆ ಉತ್ತರ ಬೇಕಿದೆ ಎಂದರು.

ಪಾಕ್ ಪರ ಘೋಷಣೆಯಾಗಿದ್ದನ್ನು ಖಾಸಗಿ ಎಫ್.ಎಸ್.ಎಲ್. ವರದಿ ಖಚಿತ ಪಡಿಸಿತ್ತು. ಆದರೂ, ಸರ್ಕಾರಿ ಎಫ್.ಎಸ್.ಎಲ್. ವರದಿ ಬಹಿರಂಗ ಪಡಿಸುವುದನ್ನು ವಿಳಂಬ ಮಾಡಲಾಗಿತ್ತು. ಸಿದ್ದರಾಮಯ್ಯ ಸರ್ಕಾರ ಈ ರೀತಿ ನಡೆದುಕೊಂಡಿದ್ದನ್ನು ಭಾರತ ಮಾತೆ ಕ್ಷಮಿಸುವುದಿಲ್ಲ ಎಂದವರು ಹೇಳಿದರು.

## ಕೃಷಿ ವಿ.ವಿ. ಹುದ್ದೆಗಳ ಭರ್ತಿಗೆ ಕ್ರಮ : ಸಚಿವ ಚಲುವರಾಯಸ್ವಾಮಿ

ಬೆಂಗಳೂರು, ಮಾ. 5 - ರಾಜ್ಯದ ನಾಲ್ಕು ಕೃಷಿ ವಿಶ್ವ ವಿದ್ಯಾಲಯಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ವಿಶ್ವವಿದ್ಯಾಲಯಗಳ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, ಕೃಷಿ ವಿಶ್ವವಿದ್ಯಾಲಯಗಳಲ್ಲಿ ಗುಣಾತ್ಮಕವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು, ಶೇ.100 ಅನುದಾನಿತ ಹುದ್ದೆಗಳಿಗೆ ಆರ್ಥಿಕ ಇಲಾಖೆಗೆ ಕೇವಲ ಮಾಹಿತಿ ನೀಡಿ ನೇಮಕಾತಿ ಮಾಡಿಕೊಳ್ಳಲು ಅನುಕೂಲವಾಗುವಂತೆ ಸೂಕ್ತ ಮಾರ್ಗಸೂಚಿ ಹೊರಡಿಸಬೇಕಿದೆ ಎಂದರು.


ಕೃಷಿ ವಿಶ್ವ ವಿದ್ಯಾಲಯಗಳು ಕೇವಲ ಸಂಶೋಧನೆಗೆ ಸೀಮಿತವಾಗದೆ ಕೃಷಿ ಹಾಗೂ ಕೃಷಿಕರ ಶ್ರೇಯೋಭಿವೃದ್ಧಿಗೆ ಬಳಕೆಯಾಗಬೇಕು. ಕೃಷಿ ವಿವಿಗಳಿಗೆ ಸರ್ಕಾರ ಹೆಚ್ಚಿನ ನೆರವು ಹಾಗೂ ಪ್ರೋತ್ಸಾಹ ನೀಡುತ್ತಿದೆ. ಇದರ ಫಲ ರೈತರಿಗೆ ವರ್ಗಾವಣೆಯಾಗಬೇಕು ಎಂದು ಸಚಿವರು ಹೇಳಿದರು.

## ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆಗೆ ಮತ್ತೊಂದು ಚಿನ್ನದ ಗರಿ

# 'ಬಾಪೂಜಿ ಎದೆ ಹಾಲಿನ ಭಂಡಾರ'

* ದಾವಣಗೆರೆ ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಹಾಗೂ ಸಂಶೋಧನಾ ಕೇಂದ್ರದ ವಿನೂತನ ಪ್ರಯತ್ನ.
* ಮಾ. 7ರಿಂದ ಸಂಸ್ಥೆಯ ಆವರಣದಲ್ಲಿ ಆರಂಭ.
* ತಾಯಂದಿರಿಂದ ಸಂಗ್ರಹಿಸಿದ ಹಾಲನ್ನು ಅವಶ್ಯಕತೆಯಿರುವ ಮಗುವಿಗೆ ಉಚಿತ ವಿತರಣೆ.

ಬಾಪೂಜಿ ಎದೆಹಾಲಿನ ಭಂಡಾರವು ಇದೇ ದಿನಾಂಕ 7ರಂದು ಗುರುವಾರ. ಉದ್ಘಾಟನೆಗೊಳ್ಳಲಿದೆ. ಇದೊಂದು ವೈದ್ಯಕೀಯ ವಿಭಾಗದಲ್ಲಿ ವಿನೂತನವಾದ ಸೇವೆಯಾಗಿದ್ದು, ದಾವಣಗೆರೆಗೊಂದು ಹೆಮ್ಮೆಯ ಸಂಗತಿಯಾಗಿದೆ.



**ಡಾ.ನಿರ್ಮಲ ಕೇಸರಿ 'ಕನಸಿನ ಕೂಸು'**

ಮಕ್ಕಳ ತಜ್ಞ ವೈದ್ಯರಾಗಿದ್ದ ದಿವಂಗತ ಡಾ. ನಿರ್ಮಲ ಕೇಸರಿ ಅವರ ಕನಸಿನ ಕೂಸಾದ ಎದೆ ಹಾಲಿನ ಭಂಡಾರವು ಸಮಾಜಕ್ಕೆ ಅರ್ಪಣೆಯಾಗುತ್ತಿದೆ. ಇದು ಮಧ್ಯ ಕರ್ನಾಟಕದಲ್ಲಿ ಸ್ಥಾಪನೆಯಾಗಿದ್ದು, ಸುತ್ತ-ಮುತ್ತಲಿನ ಐದು ಜಿಲ್ಲೆಗಳ ನವಜಾತ ಶಿಶುಗಳಿಗೆ ವರದಾನವಾಗಲಿದೆ.

- ಡಾ.ಜಿ. ಗುರುಪ್ರಸಾದ್

ದಾವಣಗೆರೆಯ ಸುತ್ತಮುತ್ತಲಿನ ಜಿಲ್ಲೆಗಳಿಗೆ ಇದು ಪ್ರಥಮ ಎದೆಹಾಲಿನ ಭಂಡಾರವಾಗಿದ್ದು, ವಿಶಾಲವಾದ ಪ್ರದೇಶದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿ ಅನ್ವಯ ಅಚ್ಚುಕಟ್ಟಾಗಿ ನಿರ್ಮಾಣವಾಗಿದ್ದು, ನವಜಾತ ಶಿಶುಗಳ ಬಗ್ಗೆ ಹೆಚ್ಚಿನ ಕಾಳಜಿಯುಳ್ಳದ್ದಾಗಿದೆ.

ತಾಯಂದಿರು ತಮ್ಮ ಮಗುವಿಗೆ ಎದೆಹಾಲುಣಿಸಿ, ಹೆಚ್ಚಾದ ಹಾಲನ್ನು ಈ ಭಂಡಾರಕ್ಕೆ ಬಂದು ದಾನವಾಗಿ ನೀಡುತ್ತಾರೆ. ಆ ಹಾಲನ್ನು ಅವಶ್ಯಕತೆ ಇರುವ 6 ತಿಂಗಳ ಒಳಗಿನ ಮಗುವಿಗೆ ನೀಡಲಾಗುವುದು. ಎದೆ ಹಾಲನ್ನು ಕೊಡುವುದು ಹಾಗೂ ಪಡೆಯುವುದು ಸಂಪೂರ್ಣವಾಗಿ ಉಚಿತವಾಗಿರುತ್ತದೆ.

ಎದೆಹಾಲನ್ನು ಪಡೆಯುವ ಮೊದಲು ತಾಯಂದಿರಿಗೆ ಯಾವುದೇ ಕಾಯಿಲೆಗಳಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ. (HIV 1&2, hepatitis B, syphilis) ಇಲ್ಲವೆಂದ ಬಳಿಕ) ಹಾಗೆಯೇ ತಾಯಿಯ ಹಾಗೂ ಆಕೆಯ ಗಂಡನ ವೈದ್ಯಕೀಯ ಇತಿಹಾಸವನ್ನು ಪಡೆದು, ಗಂಡನಿಗೂ ಕೂಡ ಯಾವುದೇ ಅಪಾಯಕಾರಿ ಚಟುವಟಿಕೆಗಳಿಲ್ಲವೆಂದ ಮೇಲೆಯೇ ತಾಯಿಯಿಂದ ಎದೆಹಾಲನ್ನು ಪಡೆಯಲಾಗುವುದು. ಪಡೆದ ಹಾಲನ್ನು ಲ್ಯಾಬ್‌ಗೆ ಪರೀಕ್ಷೆಗೆ ಕಳುಹಿಸಲಾಗುವುದು. ಲ್ಯಾಬ್‌ಗೆ ರಿಪೋರ್ಟ್ ನೆಗೆಟಿವ್ ಬಂದ ನಂತರವೇ ಹಾಲನ್ನು ಸಂಸ್ಕರಿಸಲಾಗುವುದು. ಸಂಸ್ಕರಿಸಿದ ಹಾಲನ್ನು ಮತ್ತೆ ಲ್ಯಾಬ್‌ಗೆ ಪರೀಕ್ಷೆಗೆ ಕಳುಹಿಸಲಾಗುವುದು. ಎರಡು ಸಾರಿಯೂ ರಿಪೋರ್ಟ್ ನೆಗೆಟಿವ್ ಬಂದ ನಂತರವೇ ಹಾಲನ್ನು 6 ತಿಂಗಳವರೆಗೂ ಶೇಖರಿಸಬಹುದು.

ಇದರ ಜೊತೆಗೆ ಯಾವ ತಾಯಿಗೆ ಆಪ್ತ ಸಮಾಲೋಚನೆಯ ಅವಶ್ಯಕತೆ ಇರುತ್ತದೆಯೋ ಅವರೊಂದಿಗೆ ಆಪ್ತ ಸಮಾಲೋಚನೆ ಕೂಡ ಮಾಡಲಾಗುವುದು. ಚೊಚ್ಚಲ ತಾಯಂದಿರಿಗೆ ಮಾಹಿತಿಯ ಕೊರತೆ ಇರಬಹುದು, ಎದೆ ಹಾಲುಣಿಸುವ ಕಾರ್ಯನಿರತ ಮಹಿಳೆಯ ಸಮಸ್ಯೆ,




ಶಸ್ತ್ರಚಿಕಿತ್ಸೆಯಿಂದ ಮಗುವನ್ನು ಹೊರತೆಗೆದಾಗ ಬರುವ ಸಮಸ್ಯೆ, ಅವಳಿ-ಜವಳಿ ಮಕ್ಕಳಿಗೆ ಎದೆಹಾಲುಣಿಸುವ ಸಮಸ್ಯೆ, ಎದೆತೊಟ್ಟಿನ ಸಮಸ್ಯೆ ಇರಬಹುದು, ಎದೆ ಬಾವು, ಎದೆ ಹಾಲುಣಿಸುವಾಗ ಬರುವ ಸೋಂಕುರಹಿತ ಗಂಟುಗಳು/ ಸೋಂಕು ಸಹಿತವಾದ ಗಂಟುಗಳಿರಬಹುದು. ಇಂತಹ ಸಮಸ್ಯೆಗಳಿಗೆ ಈ ಕೇಂದ್ರದಲ್ಲಿ ಆಪ್ತ ಸಮಾಲೋಚನೆ ನಡೆಸಲಾಗುವುದು.

ಇದೊಂದು ಶಿಶು ಸ್ನೇಹಿ ಆಸ್ಪತ್ರೆಯಾಗಿದ್ದು, ಮಗುವಿನ ಸರ್ವತೋಮುಖ ಬೆಳವಣಿಗೆಗೆಂದೇ ಈ ಕೇಂದ್ರವನ್ನು ತೆರೆಯಲಾಗಿದ್ದು, ಸಾರ್ವಜನಿಕರು ಇದರ ಉಪಯೋಗ ಪಡೆಯುವುದರೊಂದಿಗೆ, ಇದನ್ನು ಯಶಸ್ವಿಗೊಳಿಸಲು ಸಹಕರಿಸಬೇಕಾಗಿದೆ.

- ಡಾ . ಜಿ. ಗುರುಪ್ರಸಾದ್
ನಿರ್ದೇಶಕರು, ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ,

- ಶ್ರೀಮತಿ ಅನಿತಾ.ಬಿ.
ಲ್ಯಾಕ್ಟೀಷನಲ್ ಕೌನ್ಸೆಲರ್

# ಸರ್ಕಾಡಿಯನ್ ರಿದಂ ಕಾರಣದಿಂದ ಮಾನಸಿಕ ಪರಿಣಾಮ

## ನಿದ್ರೆಯ ಗುಣಮಟ್ಟ ಸುಧಾರಿಸುವತ್ತ ನೂತನ ಅಧ್ಯಯನದ ಇಂಗಿತ

ಸೌತ್‌ಹ್ಯಾಂಪ್ಟನ್, ಮಾ. 5 - ವ್ಯಕ್ತಿಗಳಿಗೆ ದಿನಚರಿ ಇರುವಂತೆಯೇ, ದೇಹದ ಪ್ರತಿಯೊಂದು ಜೀವ ಕಣಕ್ಕೂ ದಿನಚರಿ (ಸರ್ಕಾಡಿಯನ್ ರಿದಂ) ಇರುತ್ತದೆ. ಈ ದಿನಚರಿಯು ತಾಳಬದ್ಧವಾಗಿ ನಡೆಯುವವರೆಗೆ ಮಾತ್ರ ಆರೋಗ್ಯ ಭಾಗ್ಯ ಸಾಧ್ಯ. ದೇಹದ ನಿದ್ರೆಯ ತಾಳ ತಪ್ಪಿದಾಗ ಆರೋಗ್ಯ ಹಾಗೂ ಸ್ವಾಸ್ಥ್ಯದ ಮೇಲೆ ಪರಿಣಾಮವಾಗುತ್ತದೆ.

ಸರ್ಕಾಡಿಯನ್ ರಿದಂ ಮೇಲೆ ಹಲವಾರು ವಿಷಯಗಳಿಂದ ಪರಿಣಾಮವಾಗುತ್ತದೆ. ಸಹಜವಾಗಿ ಹಗಲು ಹಾಗೂ ರಾತ್ರಿಗೆ ಅನುಗುಣವಾಗಿ ನಾವು ವರ್ತಿಸದೇ ಇದ್ದಾಗಲೂ ಪರಿಣಾಮವಾಗುತ್ತದೆ. ಉದಾಹರಣೆಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರು ಹಾಗೂ ವಿಮಾನಗಳಲ್ಲಿ ದೂರದ ಪ್ರಯಾಣ ಮಾಡುವವರಿಗೆ ಈ ಅನುಭವ ಹೆಚ್ಚಾಗಿ ಆಗುತ್ತದೆ.

ವೃದ್ಧಾಪ್ಯ, ವಂಶವಾಹಿನಿ ಹಾಗೂ ಅಲ್ಜಮೀರ್ ರೀತಿಯ ಹಲವು ರೋಗಗಳು ದೀರ್ಘಾವಧಿಯಲ್ಲಿ ಸರ್ಕಾಡಿಯನ್ ರಿದಂ ದಿಕ್ಕು ತಪ್ಪಲು ಕಾರಣವಾಗುತ್ತವೆ.

ನಿದ್ರೆ ಹಾಗೂ ಸರ್ಕಾಡಿಯನ್ ರಿದಂ ದಿಕ್ಕು ತಪ್ಪುವುದು ಹಲವಾರು ಮಾನಸಿಕ ರೋಗಗಳ ಮುನ್ಸೂಚನೆಗೆ ಕಾರಣವಾಗಿರುತ್ತದೆ. ಖಿನ್ನತೆ, ಉದ್ವಿಗ್ನತೆ, ಬೈಪೋಲಾರ್ ಡಿಸಾರ್ಡರ್ ಹಾಗೂ ಸ್ಕಿಜೋಫ್ರೇನಿಯಾಗಳಂತಹ ರೋಗಗಳಿಗೆ ನಿದ್ರೆಯ ಸಮಸ್ಯೆ ಮುನ್ಸೂಚನೆಯಾಗಿರಬಹುದು ಎಂದು ಬ್ರಿಟನ್‌ನ ಸೌತ್‌ಹ್ಯಾಂಪ್ಟನ್ ವಿಶ್ವ ವಿದ್ಯಾಲಯದ ಸಾರಾ ಚೆಲ್ಲಪ್ಪ ಅಭಿಪ್ರಾಯ ಪಡುತ್ತಾರೆ.

ನಿದ್ರೆ ಹಾಗೂ ಸರ್ಕಾಡಿಯನ್ ಮೇಲೆ ಪರಿಣಾಮ ಹೆಚ್ಚಾದಷ್ಟೂ ವ್ಯಕ್ತಿಗಳ ಮಾನಸಿಕ ಸ್ಥಿತಿ, ಮಾನಸಿಕ ಅಸ್ವಸ್ಥತೆ ಮೇಲೆ ಪರಿಣಾಮ ಹೆಚ್ಚಾಗಿರುತ್ತದೆ. ಈ ಬಗ್ಗೆ ಸಾಕಷ್ಟು ಸಾಕ್ಷಿಗಳಿದ್ದರೂ ಇನ್ನೂ ಹಲವಾರು ವಿಷಯಗಳು ಸ್ಪಷ್ಟವಾಗಬೇಕಿದೆ ಎಂದು ಚೆಲ್ಲಪ್ಪ ಹೇಳುತ್ತಾರೆ.

ನಿದ್ರಾಹೀನತೆ ಹಾಗೂ ಸರ್ಕಾಡಿಯನ್ ರಿದಂಗಳ ದಿಕ್ಕು ಬದಲಾದಂತೆ ಹಲವಾರು ಮಾನಸಿಕ ಸಮಸ್ಯೆಗಳು ಹೆಚ್ಚಾಗುವುದು ನಮ್ಮ ಅಧ್ಯಯನಗಳಿಂದ ಕಂಡು ಬಂದಿದೆ. ಇದರ ಜೊತೆಗೆ, ಕೆಲ ನಿರ್ದಿಷ್ಟ ಜೈವಿಕ ವ್ಯವಸ್ಥೆಗಳೂ ಮಾನಸಿಕ ಅಸ್ವಸ್ಥತೆ ತರುತ್ತವೆ.

ಕಳೆದ ದಶಕಗಳಲ್ಲಿ ಹದಿಹರೆಯದವರು ಹಾಗೂ ಯುವ ವಯಸ್ಸಿನವರನ್ನು ನಿದ್ರೆಯ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬೈಪೋಲಾರ್ ಹಾಗೂ ಇತರೆ ಮಾನಸಿಕ ಅಸ್ವಸ್ಥತೆ ಹೊಂದಿದ ಶೇ.33ರಷ್ಟು ಜನರಲ್ಲಿ ಸರ್ಕಾಡಿಯನ್ ರಿದಂ ಸಮರ್ಪಕವಾಗಿಲ್ಲ. ಅವರ ನಿದ್ರೆಯ ವೇಳಾಪಟ್ಟಿಯಲ್ಲಿ ಲೋಪಗಳಿವೆ ಎಂದು ಚೆಲ್ಲಪ್ಪ ತಿಳಿಸುತ್ತಾರೆ.

ಮೆದುಳು ರಾಸಾಯನಿಕಗಳ ಮೂಲಕ ಸಂಕೇತಗಳನ್ನು ಕಳಿಸುತ್ತದೆ. ಈ ಸಂಕೇತಗಳಲ್ಲಿ ವ್ಯತ್ಯಾಸವಾದಾಗಲೂ ಸಹ ನಿದ್ರೆಯಲ್ಲಿ ಸಮಸ್ಯೆಯಾಗಿರುವುದು ನಮ್ಮ ಅಧ್ಯಯನದಿಂದ ಕಂಡು ಬಂದಿದೆ. ಇಂತಹ ಸಮಸ್ಯೆಗಳು ಜೀನ್ ಹಾಗೂ ಜೀವಕಣಗಳ ಹಂತದಲ್ಲೂ ಸರ್ಕಾಡಿಯನ್ ರಿದಂ ಬದಲಿಸಲು ಕಾರಣವಾಗಿವೆ ಎಂದವರು ಹೇಳುತ್ತಾರೆ.

ವಿಶ್ವದಾದ್ಯಂತ ಹತ್ತರಿಂದ 19 ವರ್ಷದವರಲ್ಲಿ ಪ್ರತಿ ಏಳರಲ್ಲಿ ಒಬ್ಬರು ಮಾನಸಿಕ ಸಮಸ್ಯೆಯನ್ನು ಎದುರಿಸುತ್ತಾರೆ. ಹದಿಹರೆಯದವರಲ್ಲಿ ಅಸ್ವಸ್ಥತೆಗೆ ಖಿನ್ನತೆ ಹಾಗೂ ಆತಂಕಗಳೇ ಪ್ರಮುಖ ಕಾರಣ. 15ರಿಂದ 29ರ ವಯೋಮಾನದವರಲ್ಲಿ ಈ ಸಮಸ್ಯೆಗಳೇ ಆತ್ಮಹತ್ಯೆಗೆ ನಾಲ್ಕನೇ ಪ್ರಮುಖ ಕಾರಣ. ಈ ಸಮಸ್ಯೆಗಳಿಗೆ ಹದಿಹರೆಯದಲ್ಲೇ ಪರಿಹಾರ ಕಂಡುಕೊಳ್ಳದೇ ಹೋದರೆ, ಜೀವನವಿಡೀ ಈ ಕಾಟ ಮುಂದುವರೆಯುತ್ತದೆ ಎಂದು ಚೆಲ್ಲಪ್ಪ ಹೇಳುತ್ತಾರೆ.

ಅಲ್ಲದೇ, ಹದಿಹರೆಯದಲ್ಲಿ ನಿದ್ರೆ ಹಾಗೂ ಸರ್ಕಾಡಿಯನ್ ರಿದಂ ವಿಧಾನ ಬದಲಾಗುತ್ತದೆ. ಹದಿಹರೆಯದವರು ಕೆಲವೊಮ್ಮೆ ರಾತ್ರಿ ತಡವಾಗಿ ಮಲಗುತ್ತಾರೆ. ಇದಕ್ಕೆ ಅವರಲ್ಲಿರುವ ಸರ್ಕಾಡಿಯನ್ ರಿದಂ ಪ್ರವೃತ್ತಿ ಕಾರಣ. ಶಾಲಾ ಒತ್ತಡ ಇತರೆ ಕಾರಣಗಳಿಂದಾಗಿ ಹದಿ ಹರೆಯದವರು ಬೆಳಿಗ್ಗೆ ಬೇಗ ಏಳಬೇಕಾಗುತ್ತದೆ. ಇದರಿಂದಾಗಿ ಅವರಿಗೆ ಸಮರ್ಪಕ ನಿದ್ರೆ ಸಿಗುವುದಿಲ್ಲ. ಮೊದಲೇ ಮಾನಸಿಕ ಅಸ್ವಸ್ಥತೆ ಇದ್ದವರಲ್ಲಿ, ನಿದ್ರಾಹೀನತೆ ಇನ್ನಷ್ಟು ಸಮಸ್ಯೆ ತರುತ್ತದೆ.

ಹೀಗಾಗಿ ಹದಿಹರೆಯದವರು ಹಾಗೂ ಯುವ ವಯಸ್ಸಿನಲ್ಲಿ ಸರ್ಕಾಡಿಯನ್ ರಿದಂ ಕಡೆ ಗಮನ ಹರಿಸುವುದು ಅಗತ್ಯ ಎಂಬುದು ನಮ್ಮ ಅಧ್ಯಯನ ತಿಳಿಸುತ್ತದೆ. ಅದರಲ್ಲೂ ಮಾನಸಿಕ ಆರೋಗ್ಯ ಸಮಸ್ಯೆಗಳ ನಿರ್ವಹಣೆಯ ವಿಷಯ ಬಂದಾಗ ಇನ್ನಷ್ಟು ಗಮನ ಹರಿಸಬೇಕಾಗುತ್ತದೆ. ಆದರೆ, ನಿದ್ರೆ ಹಾಗೂ ಸರ್ಕಾಡಿಯನ್ ರಿದಂಗಳ ಬಗ್ಗೆ ಇನ್ನೂ ಅಗತ್ಯ ಪ್ರಮಾಣದ ಅಧ್ಯಯನ ನಡೆದಿಲ್ಲ.

ನಿದ್ರೆಯ ಗುಣಮಟ್ಟ ಹೆಚ್ಚಿಸುವುದರಿಂದ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮವಾಗುತ್ತದೆ. ಔಷಧ ಸೇವನೆಯ ಸಮಯ, ಸಾಕಷ್ಟು ನೈಸರ್ಗಿಕ ಬೆಳಕು ಪಡೆಯುವುದು, ರಾತ್ರಿ ವೇಳೆ ಬೆಳಕಿನ ಪ್ರಮಾಣ ಕಡಿಮೆ ಮಾಡುವುದು, ಸೂಕ್ತ ಆಹಾರ ಸೇವನೆ ಹಾಗೂ ಹಗಲು ಹೊತ್ತಿನಲ್ಲಿ ದೈಹಿಕ ಚಟುವಟಿಕೆ ಇತ್ಯಾದಿಗಳಿಂದ ನಿದ್ರೆಯ ಗುಣಮಟ್ಟ ಹೆಚ್ಚಿಸಲು ಸಾಧ್ಯ.

ಈ ಬಗ್ಗೆ ಇನ್ನಷ್ಟು ಅಧ್ಯಯನದ ಅಗತ್ಯವಿದೆ. ಈ ವಿಷಯಗಳನ್ನು ಉತ್ತಮವಾಗಿ ಅರಿತಷ್ಟೂ ನೈಜ ಜಗತ್ತಿನಲ್ಲಿ ಚಿಕಿತ್ಸೆಯ ಲಾಭ ಇನ್ನಷ್ಟು ಉತ್ತಮವಾಗುತ್ತದೆ ಎಂದು ಚೆಲ್ಲಪ್ಪ ಅಭಿಪ್ರಾಯ ಪಟ್ಟಿದ್ದಾರೆ.




**ಹದಿಹರೆಯದವರು ರಾತ್ರಿ ತಡವಾಗಿ ಮಲಗುತ್ತಾರೆ. ಇದಕ್ಕೆ ಅವರಲ್ಲಿರುವ ಸರ್ಕಾಡಿಯನ್ ರಿದಂ ಪ್ರವೃತ್ತಿ ಕಾರಣ. ಶಾಲಾ ಒತ್ತಡ ಇತರೆ ಕಾರಣಗಳಿಂದಾಗಿ ಹದಿ ಹರೆಯದವರು ಬೆಳಿಗ್ಗೆ ಬೇಗ ಏಳಬೇಕಾಗುತ್ತದೆ. ಇದರಿಂದಾಗಿ ಅವರಿಗೆ ಸಮರ್ಪಕ ನಿದ್ರೆ ಸಿಗುವುದಿಲ್ಲ. ಮೊದಲೇ ಮಾನಸಿಕ ಅಸ್ವಸ್ಥತೆ ಇದ್ದವರಲ್ಲಿ, ನಿದ್ರಾಹೀನತೆ ಇನ್ನಷ್ಟು ಸಮಸ್ಯೆ ತರುತ್ತದೆ.**

# ದುಗ್ಗಮ್ಮನ ಜಾತ್ರೆ : ಭಕ್ತಾದಿಗಳಿಗೆ ಮೂಲ ಸೌಲಭ್ಯ ಕಲ್ಪಿಸಿ

(1ನೇ ಪುಟದಿಂದ) ಸ್ವಯಂ ಸೇವಕರನ್ನು ನೇಮಿಸುವ ಮೂಲಕ ಆಗಮಿಸುವ ಭಕ್ತರೊಂದಿಗೆ ಸೌಜನ್ಯಯುತವಾಗಿ ನಡೆದುಕೊಳ್ಳುವಂತೆ ನೋಡಿಕೊಂಡು ಅನಾವಶ್ಯಕವಾಗಿ ಪೊಲೀಸ್ ಭಾಗಿಯಾಗದಂತೆ ನೋಡಿಕೊಳ್ಳಬೇಕೆಂದರು.

ದೇವಸ್ಥಾನದ ಟ್ರಸ್ಟ್ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ಮಾತನಾಡಿ, ಎಲ್ಲರ ಸಹಕಾರದಿಂದ ಜಾತ್ರೆಯನ್ನು ಸುಗಮವಾಗಿ ನಡೆಸಿಕೊಂಡು ಹೋಗೋಣ ಎಂದರು.

ಪಾಲಿಕೆ ಮೇಯರ್ ವಿನಾಯಕ್ ಬಿ.ಹೆಚ್, ಟ್ರಸ್ಟ್ ಸದಸ್ಯ ಅಥಣಿ ವೀರಣ್ಣ, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ್ ಎಂ.ಸಂತೋಷ್, ಮಂಜುನಾಥ್, ಪಾಲಿಕೆ ಆಯುಕ್ತರಾದ ರೇಣುಕಾ, ಉಪವಿಭಾಗಾಧಿಕಾರಿ ದುರ್ಗಶ್ರೀ, ತಹಶೀಲ್ದಾರ್ ಡಾ.ಅಶ್ವತ್ಥ್ ಎಂ.ಬಿ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು, ಪಾಲಿಕೆ ಸದಸ್ಯರು ಹಾಗೂ ಸಾರ್ವಜನಿಕರು ಸಭೆಯಲ್ಲಿ ಭಾಗವಹಿಸಿದ್ದರು.

# ಮೌಲಾನಾ ಫೌಂಡೇಷನ್ ಮುಚ್ಚುವ ಕ್ರಮ ಖಂಡನೀಯ

ದಾವಣಗೆರೆ, ಮಾ. 5- ಯಾವುದೇ ಸೂಕ್ತ ಕಾರಣ ನೀಡದೆ ಮೌಲಾನಾ ಆಜಾದ್ ಎಜುಕೇಶನ್ ಫೌಂಡೇಶನ್ ಮುಚ್ಚಲು ಆದೇಶವನ್ನು ಕೇಂದ್ರ ಅಲ್ಪಸಂಖ್ಯಾತ ಸಚಿವಾಲಯದ ಅಧೀನ ಕಾರ್ಯದರ್ಶಿ ಧೀರಜ್ ಕುಮಾರ್ ಫೆಬ್ರವರಿ 7 ರಂದು ಆದೇಶ ಹೊರಡಿಸಿದ್ದು ಇದಕ್ಕೆ ಸೂಕ್ತ ಕಾರಣ ಒದಗಿಸಿಲ್ಲ ಎಂದು ಕರ್ನಾಟಕ ಸೋಷಿಯಲ್ ಸರ್ವೀಸ್ ಸಂಘಟನೆ ದೂರಿದೆ.

2021-22 ರಲ್ಲಿ ಮೌಲಾನಾ ಆಜಾದ್ ಫೆಲೋಶಿಪ್ ಬಂದ್ ಮಾಡಿರುವ ಕೇಂದ್ರ ಸರ್ಕಾರ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂಬ ಘೋಷಣೆ ಕೇವಲ ಚುನಾವಣಾ ಗಿಮಿಕ್‌ಕ್ಕಿಂತ ಹೆಚ್ಚೇನಿನೂ ಅಲ್ಲ. ಹೊಸ ಹೊಸ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ದೇಶವನ್ನು ಅನಕ್ಷರತೆಯಿಂದ ಶೈಕ್ಷಣಿಕ ಅಭಿವೃದ್ಧಿ ಕಡೆ ಕೊಂಡೊಯ್ಯಬೇಕಾದ ಸರ್ಕಾರಗಳು ಪಕ್ಷಪಾತ ಹಾಗೂ ದ್ವೇಷ ರಾಜಕಾರಣ ಮಾಡುತ್ತಾ ದೇಶವನ್ನು ದಿವಾಳಿಯತ್ತ ಸಾಗಿಸುತ್ತಿವೆ ಎಂದು ಸಂಘಟನೆ ಕೇಂದ್ರದ ಕ್ರಮವನ್ನು ಖಂಡಿಸಿದೆ.

# ಬರ ನಿರ್ವಹಣೆಗೆ ಸಹಾಯವಾಣಿ ಸ್ಥಾಪಿಸಿ

(1ನೇ ಪುಟದಿಂದ) ಎದುರಾಗಬಹುದಾದ ತೀವ್ರ ಬರಗಾಲವನ್ನು ನಿಭಾಯಿಸಲು ಸರ್ಕಾರ ಸಂಪೂರ್ಣ ಸಿದ್ಧತೆ ಮಾಡಿಕೊಂಡಿದೆ.

ಅನಿವಾರ್ಯವಾದಾಗ ಮಾತ್ರ ಹೊಸ ಕೊಳವೆ ಬಾವಿಗಳನ್ನು ಕೊರೆಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿದ್ದು, ಅದನ್ನು ಬಳಕೆ ಮಾಡಿಕೊಳ್ಳಬೇಕು.

ಕುಡಿಯುವ ನೀರಿಗೆ ಯಾವುದೇ ಕಾರಣಕ್ಕೂ ತೊಂದರೆಯಾಗಬಾರದು ಎಂದು ಮುಖ್ಯಕಾರ್ಯದರ್ಶಿ, ಜಿಲ್ಲಾಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಲಾಗಿದೆ.

ಸುಮಾರು 7408 ಹಳ್ಳಿಗಳಲ್ಲಿ, 1115 ವಾರ್ಡ್‌ಗಳಲ್ಲಿ ನೀರಿನ ತೊಂದರೆಯಾಗಬಹುದು ಎಂದು ಅಂದಾಜಿಸಲಾಗಿದೆ. ಅಷ್ಟೂ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಯೋಜನೆ ಸಿದ್ಧವಾಗಿದೆ. ಖಾಸಗಿ ಕೊಳವೆ ಬಾವಿ ಮಾಲೀಕರೊಂದಿಗೆ ಒಪ್ಪಂದವಾಗಿದೆ. ಟ್ಯಾಂಕರ್ ಮೂಲಕ ನೀರು ಒದಗಿಸಲು ಕ್ರಮ ವಹಿಸಲಾಗಿದೆ ಎಂದರು.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ 307 ಸಭೆಗಳಾಗಿವೆ. ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ. ಕೆಲವೆಡೆ ಸರ್ಕಾರದ ಕೊಳವೆ ಬಾವಿಗಳನ್ನು ಆಳ ಮಾಡುವುದು, ಫ್ಲಾಶಿಂಗ್ ಮಾಡುವುದು, ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆಯುವುದು, ಟ್ಯಾಂಕರ್ ಮೂಲಕ ನೀರು ಸರಬರಾಜಿಗೆ ಕ್ರಮ ವಹಿಸಲಾಗಿದೆ ಎಂದರು.

ಇಂದಿನವರೆಗೆ 33.25 ಲಕ್ಷ ರೈತರಿಗೆ 631 ಕೋಟಿ ರೂ.ಗಳ ತಾತ್ಕಾಲಿಕ ಪರಿಹಾರ ನೀಡಲಾಗಿದೆ.

ಸರ್ಕಾರ 600 ಕೋಟಿ ರೂ.ಗಳ ಬೆಳೆ ವಿಮೆ ಪರಿಹಾರ ಒದಗಿಸಿದೆ. ಇನ್ನೂ 800 ಕೋಟಿ ರೂ. ಪಾವತಿಯಾಗುವ ನಿರೀಕ್ಷೆ ಇದೆ. ಗ್ಯಾರಂಟಿ ಯೋಜನೆಗಳಿಂದಾಗಿ ಪ್ರತಿ ಕುಟುಂಬಕ್ಕೆ 4 ರಿಂದ 5 ಸಾವಿರ ರೂ. ನಂತೆ ಒಂದು ಕೋಟಿ 20 ಲಕ್ಷ ಕುಟುಂಬಗಳಿಗೆ 4.50 ಕೋಟಿ ಜನರಿಗೆ ಇದರ ಲಾಭ ದೊರೆತಿದೆ, ಈ ಕಾರಣದಿಂದ ಜನ ಗುಳೇ ಹೋಗುತ್ತಿಲ್ಲ ಎಂದರು.

## ಜಿಲ್ಲೆಯಲ್ಲಿ 175 ಸಮಸ್ಯಾತ್ಮಕ ಗ್ರಾಮಗಳು

(1ನೇ ಪುಟದಿಂದ) ಬರುವ ಜೂನ್ ಅಂತ್ಯದವರೆಗೆ ಬರ ನಿರ್ವಹಣೆಗೆ ಸೂಕ್ತ ಕ್ರಿಯಾಯೋಜನೆ ರೂಪಿಸಿ, ಸಮರ್ಪಕ ಕುಡಿಯುವ ನೀರು ಪೂರೈಕೆ ಮತ್ತು ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಕ್ರಮ ಕೈಗೊಂಡು ಜನರಿಗೆ ಉದ್ಯೋಗ ನೀಡುವ ಕೆಲಸ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವೀಡಿಯೋ ಸಂವಾದದಲ್ಲಿ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್.ಬಿ.ಇಟ್ನಾಳ್ ಉಪಸ್ಥಿತರಿದ್ದರು. ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಬಾನು.ಎಸ್.ಬಳ್ಳಾರಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಎಸ್ಸೆಸ್ಸೆಂ - ಹರೀಶ್ ನಡುವೆ ವಾಕ್ಸಮರ

(1ನೇ ಪುಟದಿಂದ) ಇದೇ ವೇಳೆ ಸಚಿವರು ಕುಟುಕಿದರು. ಈ ಸಂದರ್ಭದಲ್ಲಿ ಸಚಿವ ಮಲ್ಲಿಕಾರ್ಜುನ್ ಹಾಗೂ ಶಾಸಕ ಹರೀಶ್ ನಡುವೆ ಮಾತಿನ ಚಕಮಕಿ ನಡೆಯಿತು.

ದೂಡಾದಿಂದ ಶಾಸಕರ ಗಮನಕ್ಕೆ ತರದೇ ಅಕ್ರಮವಾಗಿ ಡೋರ್ ನಂಬರ್, ಲೇಔಟ್ ಅಪ್ರೂವಲ್ ನೀಡಲಾಗಿದೆ. ನಾನೂ ಸಹ ದೂಡಾ ಸದಸ್ಯ. ನಮ್ಮ ಗಮನಕ್ಕೆ ತರದೇ, ಹೇಗೆ ಲೇಔಟ್‌ಗೆ ಅಪ್ರೂವಲ್ ಕೊಟ್ಟಿದ್ದೀರಿ ? ಎಂದು ಹರೀಶ್ ಜಿಲ್ಲಾಧಿಕಾರಿಗಳಿಗೆ ಪ್ರಶ್ನಿಸಿದರು.

# ಮಾವೋ ಸಂಪರ್ಕ : ಸಾಯಿಬಾಬಾ ದೋಷಮುಕ್ತ

ನಾಗಪುರ, ಮಾ. 5 – ಮಾವೋಗಳ ಜೊತೆ ಸಂಪರ್ಕ ಹೊಂದಿದ ಪ್ರಕರಣದಿಂದ ದೆಹಲಿ ವಿಶ್ವವಿದ್ಯಾಲಯದ ಉಪನ್ಯಾಸಕ ಜಿ.ಎನ್. ಸಾಯಿಬಾಬಾ ಅವರನ್ನು ದೋಷಮುಕ್ತಗೊಳಿಸಿ ಬಾಂಬೆ ಹೈಕೋರ್ಟ್ ಆದೇಶ ಹೊರಡಿಸಿದೆ. ಸಾಯಿಬಾಬಾ ವಿರುದ್ಧದ ಪ್ರಕರಣವನ್ನು ಸಂಶಯಾತೀತವಾಗಿ ಇತ್ಯರ್ಥಪಡಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಹೈಕೋರ್ಟ್ ಹೇಳಿದೆ.

2014ರಲ್ಲಿ ಸಾಯಿಬಾಬಾ ಬಂಧಿಸಲಾಗಿತ್ತು. ನಂತರದಿಂದ ನಾಗಪುರ ಕೇಂದ್ರ ಬಂಧೀಖಾನೆಯಲ್ಲಿ ಇರಿಸಲಾಗಿದೆ. 2017ರಲ್ಲಿ ಸೆಷನ್ಸ್ ನ್ಯಾಯಾಲಯ ಸಾಯಿಬಾಬಾಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

# ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ದಾವಣಗೆರೆ, ಮಾ. 5 - ನಗರದ ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನವಾಗಿ 'ರಾಮನ್ ಪರಿಣಾಮ'ದ ಆವಿಷ್ಕಾರದ ಸ್ಮರಣಾರ್ಥವಾಗಿ ಆಚರಿಸಲಾಯಿತು.

1986 ರಲ್ಲಿ, ಭಾರತ ಸರ್ಕಾರವು ಫೆಬ್ರವರಿ 28 ಅನ್ನು ರಾಷ್ಟ್ರೀಯ ವಿಜ್ಞಾನ ದಿನ (NSD) ಎಂದು ಗೊತ್ತು ಪಡಿಸಿತ್ತು. ಸಿ.ವಿ.ರಾಮನ್ ಎಂದೂ ಕರೆಯಲ್ಪಡುವ ಚಂದ್ರಶೇಖರ ವೆಂಕಟ ರಾಮನ್ ಅವರು 'ರಾಮನ್ ಪರಿಣಾಮ'ದ ಆವಿಷ್ಕಾರವನ್ನು ಘೋಷಿಸಿದ್ದರು. ಇದಕ್ಕಾಗಿ ಅವರಿಗೆ 1930 ರಲ್ಲಿ ನೊಬೆಲ್ ಪ್ರಶಸ್ತಿ ನೀಡಲಾಯಿತು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಕಾರ ಈ ವರ್ಷದ ರಾಷ್ಟ್ರೀಯ ವಿಜ್ಞಾನ ದಿನದ ಆಚರಣೆಗಳು' ವಿಕಸಿತ್ ಭಾರತಕ್ಕಾಗಿ ಸ್ಥಳೀಯ ತಂತ್ರಜ್ಞಾನಗಳು' ಎಂಬ ವಿಷಯವನ್ನು ಆಧರಿಸಿವೆ.

ಸ್ವದೇಶಿ-ಬೆಳೆದ ತಂತ್ರಜ್ಞಾನಗಳ ಮೇಲೆ ಕಾರ್ಯತಂತ್ರದ ಗಮನವನ್ನು ಹೊಂದಿರುವ, ಕೆಳಗಿನ ವಿಭಾಗದಲ್ಲಿ ವಿವರಿಸಿದಂತೆ 2024 ರ ರಾಷ್ಟ್ರೀಯ ವಿಜ್ಞಾನ ದಿನದ ಥೀಮ್ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿದೆ. ಸ್ಥಳೀಯ ತಂತ್ರಜ್ಞಾನಗಳು' ಎಂಬ ವಿಷಯವನ್ನು ಆಧರಿಸಿವೆ.

ವೈಜ್ಞಾನಿಕ ಬೆಳವಣಿಗೆಯು ಮಾನವನ ಜೀವನವನ್ನು ಅನೇಕ ರೀತಿಯಲ್ಲಿ ಬದಲಾಯಿಸಿದೆ. ವಿಜ್ಞಾನವು ಮಾನವರ ಜೀವನವನ್ನು ಉತ್ತಮ ಮತ್ತು ಸುಲಭಗೊಳಿಸಿದೆ. ರೊಬೋಟ್, ಕಂಪ್ಯೂಟರ್, ಮೊಬೈಲ್ ಸಾಧನಗಳು ಇತ್ಯಾದಿಗಳನ್ನು ವಿಜ್ಞಾನದ ಸಹಾಯದಿಂದ ಮಾತ್ರ ಕಂಡುಹಿಡಿಯ ಲಾಗಿದೆ. ಆದ್ದರಿಂದ, ವಿಜ್ಞಾನವು ನಮ್ಮ ಜೀವನದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದೆ. ಭಾರತವು ವಿಜ್ಞಾನ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದೆ. ಅನೇಕ ಮಹಾನ್ ವಿಜ್ಞಾನಿಗಳು ಭಾರತದಲ್ಲಿ ಜನಿಸಿದರು. ವಿಜ್ಞಾನ ಕ್ಷೇತ್ರದಲ್ಲಿ ಭಾರತವನ್ನು ಗುರುತಿಸಿದರು. ಭಾರತ ಇಂದು ವಿಶ್ವದಲ್ಲಿ ವಿಜ್ಞಾನ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದೆ ಎಂದರು.

ಶಾಲೆಯ ಪ್ರಾಂಶುಪಾಲ ಯತೀಶ್. ಎಚ್. ವಿ. ಆಚಾರ್ ಮಾತನಾಡಿ ವಿಜ್ಞಾನ ದಿನಾಚರಣೆಯ ಮಹತ್ವವನ್ನು ತಿಳಿಸಿದರು.

ವಿಜ್ಞಾನ ದಿನದಂದು ಶಾಲೆಯ ವಿದ್ಯಾರ್ಥಿಗಳು ವಿಜ್ಞಾನಕ್ಕೆ ಸಂಬಂಧಿಸಿದ ಮಾದರಿ ಮತ್ತು ಪ್ರಯೋಗ ವಿಧಾನಗಳ ಮೂಲಕ ವಸ್ತು ಪ್ರದರ್ಶನ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.



# ರಾಜೀನಾಮೆ ನಂತರ ಬಿಜೆಪಿಗೆ ಸೇರಲಿರುವ ಹೈಕೋರ್ಟ್ ನ್ಯಾಯಮೂರ್ತಿ

ಕೊಲ್ಕೊತಾ, ಮಾ. 5 – ಕಲ್ಕತ್ತಾ ಹೈಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ರಾಜೀನಾಮೆ ನೀಡಿರುವ ಅಭಿಜಿತ್ ಗಂಗೋಪಾಧ್ಯಾಯ್, ಬಿಜೆಪಿಗೆ ಸೇರ್ಪಡೆಯಾಗುವುದಾಗಿ ಘೋಷಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಅವರು, ಬಹುತೇಕ ಮಾರ್ಚ್ 7ರಂದು ಬಿಜೆಪಿಗೆ ಸೇರುತ್ತೇನೆ ಎಂದಿದ್ದಾರೆ. ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಬಗ್ಗೆ ಅವರು ಯಾವುದೇ ನೇರ ಉತ್ತರ ನೀಡಿಲ್ಲ.

# 10ಕ್ಕೆ 'ಮತದಾನ ಜಾಗೃತಿ' ಕವಿಗೋಷ್ಠಿ

ದಾವಣಗೆರೆ, ಮಾ. 5 - ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಇದೇ ದಿನಾಂಕ 10ರಂದು ಭಾನುವಾರ ಬೆಳಿಗ್ಗೆ 10 ಗಂಟೆಗೆ ಕಲಾಕುಂಚ ಕಛೇರಿಯ ಸಭಾಂಗಣದಲ್ಲಿ 'ಮತದಾನ ಜಾಗೃತಿ ಕವಿಗೋಷ್ಠಿ' ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಆಸಕ್ತ ನವ, ಯುವ, ಹಿರಿಯ, ಕಿರಿಯ, ಕವಿ-ಕವಯತ್ರಿಯರು ವ್ಯಾಟ್ಸಾಪ್ 9449004004 ನಂಬರ್‌ಗೆ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ: 9538732777.

# ಡಿಕೆ ವಿರುದ್ಧದ ಪ್ರಕರಣ ವಜಾ

(1ನೇ ಪುಟದಿಂದ) ಸೂರ್ಯ ಕಾಂತ್ ಹಾಗೂ ಕೆ.ವಿ. ವಿಶ್ವನಾಥನ್ ಅವರು ಶಿವಕುಮಾರ್‌ಗೆ ಪರಿಹಾರ ನೀಡಿದ್ದಾರೆ. 2017ರ ಆಗಸ್ಟ್ ತಿಂಗಳಲ್ಲಿ ಆದಾಯ ತೆರಿಗೆ ಇಲಾಖೆಯು ಶಿವಕುಮಾರ್ ವಿರುದ್ಧ ತೆರಿಗೆ ವಂಚನೆ ಆರೋಪ ಮಾಡಿತ್ತು. ನಂತರ ದೆಹಲಿ ಸೇರಿದಂತೆ ಹಲವೆಡೆ ದಾಳಿ ನಡೆಸಲಾಗಿತ್ತು. ಈ ವೇಳೆ 8.59 ಕೋಟಿ ರೂ.ಗಳನ್ನು ವಶಪಡಿಸಿಕೊಳ್ಳಲಾಗಿತ್ತು. ನಂತರ ಆದಾಯ ತೆರಿಗೆ ಇಲಾಖೆಯು ಬೆಂಗಳೂರು ನ್ಯಾಯಾಲಯದಲ್ಲಿ ತೆರಿಗೆ ವಂಚನೆ ಪ್ರಕರಣ ದಾಖಲಿಸಿತ್ತು. ನಂತರ ಜಾರಿ ನಿರ್ದೇಶನಾಲಯ 2018ರಲ್ಲಿ ಅಕ್ರಮ ಹಣ ಪ್ರಕರಣ ದಾಖಲಿಸಿತ್ತು.

# ಛತ್ರಪತಿ ಶಿವಾಜಿ ಜಯಂತಿ ರಾಣೇಬೆನ್ನೂರಿನಲ್ಲಿ ಭವ್ಯ ಮೆರವಣಿಗೆ



ರಾಣೇಬೆನ್ನೂರು, ಮಾ. 5 - ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ಯ ಇಲ್ಲಿನ ಮರಾಠಾ ಕ್ಷತ್ರಿಯ ಸಮಾಜದಿಂದ ಭವ್ಯ ಮೆರವಣಿಗೆ ಏರ್ಪಡಿಸಲಾಗಿತ್ತು. ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಹೊರಟ ಮೆರವಣಿಗೆಗೆ ಮಾಜಿ ಶಾಸಕ ಅರುಣಕುಮಾರ ಪೂಜಾರ ಚಾಲನೆ ನೀಡಿದರು. ಬಿಜೆಪಿ ಮುಖಂಡ ಪ್ರಕಾಶ ಪೂಜಾರ, ಎಸ್.ಎಸ್. ರಾಮಲಿಂಗಣ್ಣನವರ, ಸಂತೋಷ ಪಾಟೀಲ, ಜಿ.ಜಿ. ಹೊಟ್ಟಿಗೌಡ್ರ, ಪರಮೇಶ ಗೂಳಣ್ಣನವರ, ಮಲ್ಲಪ್ಪ ಅಂಗಡಿ, ಸಮಾಜದ ಶಿವಮೂರ್ತಿ ದಿಲ್ಲಿವಾಲಾ, ಪರಶುರಾಮ ಕಾಳೇರ, ಸುಂದರಾ ರಾಮಚಂದ್ರ ಮತ್ತಿತರರಿದ್ದರು.


**ವಿವೇಕಾನಂದ ಬಡಾವಣೆಯಲ್ಲಿ 30x48 ಸೈಟು ಮಾರಾಟಕ್ಕೆ**
Dollers Colony - 30x50, 40x50 ಮನೆ & ಸೈಟ್, Anjaneya, Siddaveerappa - 30x40, ಸೈಟ್ ಮನೆ, Mahalakshmi - 30x40, 30x50, ಸೈಟ್ ಮನೆ, Devaraj Urs Badavane - Corner site (Commercial) & 50x80 ಸೈಟ್ Bangalore : RR Nagara & Taralabalu nagara site - 30x60 & 30x50
Veeresh - 76768 57676

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿ, ಪೂರ್ವ ದಕ್ಷಿಣ ಕಾರ್ನರ್ ಸೈಟು, ಒಟ್ಟು 1994 ಅಡಿ, ಬಾಲಾಜಿ ಬಡಾವಣೆಯಲ್ಲಿ ಅಕ್ಕ-ಪಕ್ಕ 30x50, 30x50.
ಮಂಜುನಾಥ್ ಏಜೆಂಟ್
98444 91792

**ಸೈಟುಗಳು ಮಾರಾಟಕ್ಕಿವೆ**
ಪೈಲ್ವಾನ್ ಚನ್ನಬಸಪ್ಪ ಲೇಔಟ್‌ನಲ್ಲಿ 30x60 (East) 60 ಅಡಿ ರಸ್ತೆಗೆ, ಶಿವಕುಮಾರ ಬಡಾವಣೆ 30x40 ಪೂರ್ವ, ಬನಶಂಕರಿ ಬಡಾವಣೆ 40x60 ಪೂರ್ವ, 30x50 ಪೂರ್ವ, ಶಿವ-ಪಾರ್ವತಿ ಲೇಔಟ್ 30x40 ಪಶ್ಚಿಮ, ಆಂಜನೇಯ ಬಡಾವಣೆ 30x40 ದಕ್ಷಿಣ.
95385 65909

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
40x60 East, 40x60 North, 40x60 West, 40x60, 40x60 South ಅಕ್ಕ-ಪಕ್ಕ, 30x50 West. 60 ಅಡಿ ರೋಡ್‌ಗಿದೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ನಾಟಿ ಕೋಳಿ ಮೊಟ್ಟೆ ದೊರೆಯುತ್ತದೆ**
ಬೇಕಾದಲ್ಲಿ ಸಂಪರ್ಕಿಸಿ :
ಮೊ. 83105-91159

**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
98441-33022

**ಕೆಲಸಕ್ಕೆ ಬೇಕಾಗಿದ್ದಾರೆ**
ನರ್ಸಿಂಗ್ ಕೆಲಸಕ್ಕೆ-01 (ಜಿ.ಎನ್.ಎಂ./ಎ.ಎನ್.ಎಂ)
ನೇರ ಸಂದರ್ಶನಕ್ಕೆ ಸಂಪರ್ಕಿಸಿ
86186 42929
08192-252228

**ಮನೆ ಬಾಡಿಗೆಗಿದೆ**
ಹೊಸ ಮನೆ ಪೂರ್ವ ದಿಕ್ಕಿನ ವಾಸ್ತು ಇರುವ ಗ್ರೌಂಡ್ 1ನೇ ಫ್ಲೋರ್, ಸೋಲಾರ್, ನಲ್ಲಿ, ಬೋರ್, 2 ಬೆಡ್ ರೂಮ್ ಮನೆ, ಶಿವಕುಮಾರ ಸ್ವಾಮಿ ನಗರ, 2ನೇ ಹಂತ ಹದಡಿ ರಸ್ತೆ, ಸಂಪರ್ಕಿಸಿ :
94481 78626

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಸಂಪರ್ಕಿಸಿ.
80883 67539, 97390 63544

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಹುಡುಗರು ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಟೈರ್ ಕ್ಲಬ್
ಸಾಯಿ ಇಂಟರ್‌ನ್ಯಾಷನಲ್ ಹೋಟೆಲ್ ಹತ್ತಿರ, ರಾಯಲ್ ಓಕ್ ಎದುರುಗಡೆ, ಪಿ.ಬಿ. ರಸ್ತೆ, ದಾವಣಗೆರೆ.
(ಸಂಬಳ : 14,000 ರೂ.)
73488 82183, 90356 56519

**ರೂಮ್ ಬಾಡಿಗೆಗೆ ಇದೆ**
ಅಟ್ಯಾಚ್ ಬಾತ್ ರೂಮ್ ಇರುವ ರೂಮ್ 5ನೇ ಮೇನ್, ರಾಮ್ ಅಂಡ್ ಕೋ ಸರ್ಕಲ್ ಹತ್ತಿರ, 1ನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ
97431 50555

**ಸೈಟುಗಳು ಮಾರಾಟಕ್ಕಿವೆ**
40x60 MB ಸಿಟಿ ಪೂರ್ವ 40x60 ಸುಬ್ರಹ್ಮಣ್ಯ ನಗರ, 50x60 ವಿನಾಯಕ ಬಡಾವಣೆ ದಕ್ಷಿಣ, ಎಸ್.ಎಸ್. ಹಾಸ್ಪಿಟಲ್‌ಗೆ ಹತ್ತಿರ ಪಶ್ಚಿಮ 30x40 ಡಾಲರ್ಸ್‌ಕಾಲೋನಿ ಉತ್ತರ. ಹೊಲಗದ್ದೆ & ತೋಟಗಳು ಕೊಡುವ, ಕೊಳ್ಳುವುದಿದ್ದರೆ ವಿಚಾರಿಸಿ :
99727 00107

**ಹೋಟೆಲ್‌ನಲ್ಲಿ ಲೇಡಿ ಕ್ಯಾಷಿಯರ್ ಬೇಕಾಗಿದ್ದಾರೆ**
ಬೆಳಿಗ್ಗೆ 9.30 ರಿಂದ ಸಂಜೆ 6.00ರವರೆಗೆ ರೊಟ್ಟಿ, ಚಪಾತಿ, ಹೋಳಿಗೆ, ಮಾಡಲು ಕೆಲಸಗಾರರು ಬೇಕಾಗಿದ್ದಾರೆ.
99012 36631

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ 40x60 East, 60x50 East, 30x40 West, 30x50 West, 30x50, 30x50 East ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.6.3.2024ರ ಬುಧವಾರ
ದಿ.7.3.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಕುರಿಗಳು ಮಾರಾಟಕ್ಕಿವೆ**
ಶ್ರೀ ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ.
ದಾವಣಗೆರೆಯಿಂದ ಕೇವಲ 4 ಕಿ.ಮೀ. ಐಗೂರು ರಸ್ತೆ.
ಸಂಪರ್ಕಿಸಿ 70196 02944

**ಸಂಕಲ್ಪ ಫೌಂಡೇಶನ್**
ಕ್ಷೇತ್ರ ಮಟ್ಟದಲ್ಲಿ ಸಮುದಾಯ ಸಂಘಟಕರು ಬೇಕಾಗಿದ್ದಾರೆ.
94499 40097
70192 72603
(ಪಾರ್ಟ್ ಟೈಮ್ ಮತ್ತು ಫುಲ್ ಟೈಮ್ ಕೆಲಸ ಮಾಡಲು)

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690


**ಸೈಟು ಮಾರಾಟಕ್ಕಿದೆ**
ಹರಿಹರ ಶೇರಾಪುರದ ಕರ್ನಾಟಕ ಗೃಹಮಂಡಳಿಯಲ್ಲಿ ಸೈಟು ಮಾರಾಟಕ್ಕಿದೆ. 50x80 ಅಡಿ ದಕ್ಷಿಣ, 60 ಅಡಿ ರಸ್ತೆಗೆ
SK Real Estate
97430 93568

**ಭೂಮಾಪಕರ ಹುದ್ದೆಗಳ ನೇಮಕಾತಿ**
ಪರೀಕ್ಷೆಗೆ ತರಬೇತಿ ನೀಡಲಾಗುವುದು ಹಾಗೂ 8 ರಿಂದ 10ನೇ ತರಗತಿಗಳಿಗೆ Maths, Science ಟ್ಯೂಷನ್ ಮಾಡಲಾಗುವುದು. Home Tuitions also available (10 ಜನರಿಗೆ ಮಾತ್ರ ಒಂದು ಬ್ಯಾಚಿನಲ್ಲಿ ಅವಕಾಶ.
96631 59162, 70905 42089

**ಬೇಕಾಗಿದ್ದಾರೆ**
ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್ ವುಳ್ಳ ಡ್ರೈವರ್, ಅಪೇ ಆಟೋ ಓಡಿಸಬಲ್ಲ ಲೈಸನ್ಸ್ ವುಳ್ಳ ಡ್ರೈವರ್ , ಸೇಲ್ಸ್ ಮನ್, ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ. ಅನುಭವವುಳ್ಳವರು
ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಡಿಸೈನರ್ ಬೇಕಾಗಿದ್ದಾರೆ**
ಫೋಟೋಶಾಪ್, Coral draw ಅನುಭವ ಇರುವ ಹುಡುಗರು ಬೇಕಾಗಿದ್ದಾರೆ.
ನವರಂಗ ಮುದ್ರಣ,
ಶಿವಪ್ಪಯ್ಯ ಸರ್ಕಲ್, ದಾವಣಗೆರೆ
80500 39392

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಹೆಸರು ಬದಲಾವಣೆ**
ಶಶಿಧರ್ ಸಿ.ಯು. ಬಿನ್ ಉಜ್ಜಿನಪ್ಪ, ವಯಸ್ಸು 40 ವರ್ಷ, ಚಿರಡೋಣಿ ಗ್ರಾಮ, ಚನ್ನಗಿರಿ ತಾ||, ದಾವಣಗೆರೆ ಜಿಲ್ಲೆ ವಾಸಿಯಾದ ನಾನು ಹೇಳುವುದೇನೆಂದರೆ ನನ್ನ ಮಗಳಾದ ಕುಮಾರಿ ಮನಸ್ವಿ ಎಸ್. ವಯಸ್ಸು 3 ವರ್ಷ ಇವಳ ಹೆಸರನ್ನು ಮನಸ್ವಿ ಎಸ್. ಎಂದು ನಾಮಕರಣ ಮಾಡಿರುತ್ತೇನೆ. ಆದರೆ ಇತ್ತೀಚಿಗೆ ಅವಳಿಗೆ ಸದರಿ ಹೆಸರು ಬಲಬಾರದೇ ಇರುವುದರಿಂದ ದಿ. : 05.03.2024 ರಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ಸನ್ಮತಿ ಸಾರಿಕಾ ಆಚಾರ್ ಎಂದು ಹೆಸರನ್ನು ಬದಲಾಯಿಸಿ ಕೊಂಡಿರುತ್ತೇನೆ. ಇನ್ನು ಮುಂದೆ ಎಲ್ಲಾ ದಾಖಲೆಗಳು, ವಿದ್ಯಾಭ್ಯಾಸ ಹಾಗೂ ಎಲ್ಲಾ ವ್ಯವಹಾರ ಗಳು ಸನ್ಮತಿ ಸಾರಿಕಾ ಆಚಾರ್ ಹೆಸರಿನಲ್ಲಿ ವ್ಯವಹರಿಸುತ್ತೇನೆ.
ಫೋ.: 99723 76006

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

Use Summer Holidays Effectively
**Kids Summer Computer Education**
Learn Computer Basics, MS-Office & Internet
IATM Computers
2nd main, Akkamahadevi Samaja Complex, PJ Exten, 6th Cross, Ram & Co. Circle, Davangere.
Call for more Information
98867 63469, 90367 19573

**NAME CHANGE**
I, Pradeep B.H S/o Late B. Hanumantha Gowda, residing at No. 1807/47, Anjaneya badavane, 18th Cross, Davanagere, I have changed my minor son name from Nandan Kumar B.P to Nandan Gowda B.P. Vide affidavit Date : 05.03.2024 sworn before Notary Hanagi Ashoka.K Davanagere.

**ಸೈಟ್ ಮಾರಾಟಕ್ಕಿದೆ**
ಪೂರ್ವ ದಿಕ್ಕಿನ 65x65 ಅಳತೆಯ ಕಾರ್ನರ್ ಸೈಟ್ ರಶ್ಮಿ ಹಾಸ್ಟೆಲ್ ಹತ್ತಿರ, ಸೈಟ್ ಮಾರಾಟಕ್ಕಿದೆ.
63605 94165
95384 86666

**RENT OR SALE**
Medical Shop, RTO Office Road, Devaraj Urs Layout `C' Block Near Shivali Talkes Road Main Circle, Davanagere.
97388 65815

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

# 24 ರಂದು ಇಂಡಿಯಾ ಒಕ್ಕೂಟ ಪಕ್ಷಗಳ ಬೃಹತ್ ಸಮಾವೇಶ ತೀರ್ಮಾನ



ದಾವಣಗೆರೆ, ಮಾ. 5 - ಕೇಂದ್ರ ಸರ್ಕಾರದ ಹಿಟ್ಲರ್ ಆಡಳಿತವನ್ನು ಖಂಡಿಸಿ ನಗರದಲ್ಲಿ ಇದೇ ದಿನಾಂಕ 24ರಂದು ಇಂಡಿಯಾ ಒಕ್ಕೂಟದ ಪಕ್ಷಗಳು, ಸಂಘಟನೆಗಳ ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲು ಜಿಲ್ಲಾ ಕಾಂಗ್ರೆಸ್ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಇಂಡಿಯಾ ಒಕ್ಕೂಟದ ಪಕ್ಷಗಳು, ಸಂಘಟನೆಗಳ ಮುಖಂಡರ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಇದೇ ವೇಳೆ ಕೆಪಿಸಿಸಿ ಸಂಯೋಜಕ ಎಸ್.ಎಲ್. ಆನಂದಪ್ಪ ಮಾತನಾಡಿ, ಕೇಂದ್ರದಲ್ಲಿನ ಸರ್ವಾಧಿಕಾರಿ ಧೋರಣೆಯಿಂದಾಗಿ ದೇಶದ ಯುವ ಜನಾಂಗ ತೀವ್ರ ತೊಂದರೆ ಅನುಭವಿಸುವಂತಾಗಿದೆ. ಬಿಜೆಪಿ ಸರ್ಕಾರದ ದುರಾಡಳಿತವನ್ನು ಅಂತ್ಯಗೊಳಿಸಲು ಯುವ ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಹೇಳಿದರು.

ಸರ್ಕಾರ ಸ್ವತಂತ್ರವಾಗಿ ಅಧಿಕಾರ ನಡೆಸುವ ಬದಲು ಸರ್ವಾಧಿಕಾರಿ ಆಡಳಿತ ಮಾಡುತ್ತಾ ಬಂದಿದ್ದು, ಬಿಜೆಪಿ ಸರ್ಕಾರ ಜನಪರ ಆಡಳಿತ ನೀಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು.

ಪಿಎಂಎವೈ ಯೋಜನೆಯಡಿ ಸರ್ವರಿಗೂ ಸೂರು ಕಲ್ಪಿಸುವಲ್ಲಿ ಕೇಂದ್ರದ ಬಿಜೆಪಿ ಸರ್ಕಾರ ಜನರಿಗೆ ಸರಿಯಾದ ಮಾಹಿತಿ ನೀಡದೇ ಕೇಂದ್ರ, ರಾಜ್ಯ ಸರ್ಕಾರಗಳ ಪಾಲಿನ ಜೊತೆಗೆ ಫಲಾನುಭವಿಗಳಿಂದ ವಂತಿಗೆ ಸ್ವೀಕರಿಸಿ ಸೂರು ಕಲ್ಪಿಸುವ ಉದ್ದೇಶವಿದೆ. ಆದರೆ ಜಿಎಸ್‌ಟಿ ಹೇರುತ್ತಿರುವುದು ಯಾವ ನ್ಯಾಯ ? ಎಂದು ಪ್ರಶ್ನಿಸಿದರು.

ಬಿಜೆಪಿ ಜನ ವಿರೋಧಿ, ರೈತ ವಿರೋಧಿ, ಕಾರ್ಮಿಕ ವಿರೋಧಿ ನೀತಿಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಬಿಜೆಪಿ-ಜೆಡಿಎಸ್ ಹೊರತುಪಡಿಸಿ ಇಂಡಿಯಾ ಒಕ್ಕೂಟ ಪಕ್ಷಗಳ, ಸಂಘಟನೆಗಳ ಕಾರ್ಯಕರ್ತರ ಸಮಾವೇಶ ನಡೆಸಲಾಗುವುದು ಎಂದರು.

ಸಿಪಿಐ ಮುಖಂಡ ಆವರಗೆರೆ ಹೆಚ್.ಜಿ. ಉಮೇಶ್ ಮಾತನಾಡಿ, ಕೇಂದ್ರ ಸರ್ಕಾರ ಕೃಷಿಗೆ ಮಾರಕವಾಗಿರುವ ಮೂರು ರೈತ ವಿರೋಧಿ ಕಾಯ್ದೆಗಳನ್ನು ಜಾರಿ ಮಾಡಿತು. ಜಿಎಸ್‌ಟಿ, ಹಣದುಬ್ಬರ ವಿಚಾರದಲ್ಲಿ ವೈಫಲ್ಯ ಅನುಭವಿಸಿದೆ. ಆದರೆ ಕೇವಲ ಜನರಿಗೆ ಮಂಕುಬೂದಿ ಎರಚುತ್ತಿದೆ. ಈ ಬಗ್ಗೆ ಜನಜಾಗೃತಿ ಅತ್ಯವಶ್ಯ. ಹಾಗಾಗಿ ರಾಜಕೀಯ ಪಕ್ಷಗಳು ಒಗ್ಗೂಡಿ, ಜಾತ್ಯತೀತ ನಿಲುವುಗಳನ್ನು ಲೋಕಸಭಾ ಚುನಾವಣೆಯಲ್ಲಿ ಹೊಂದಿರುವ ಅಭ್ಯರ್ಥಿಗಳನ್ನು ಗೆಲ್ಲಿಸಬೇಕಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆಯಾದರೂ ಅಭಿವೃದ್ಧಿಗಿಂತ ಪ್ರಚಾರಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ರಾಜ್ಯದಲ್ಲೂ ಈ ಹಿಂದೆ ಅಧಿಕಾರದಲ್ಲಿದ್ದಾಗ ಅಶಾಂತಿ ವಾತಾವರಣ ಸೃಷ್ಟಿಸುವ ಕೆಲಸ ಮಾಡಿತ್ತು. ಧರ್ಮದ ವಿಚಾರದಲ್ಲಿ ಜನರನ್ನು ತೊಂದರೆಗೀಡು ಮಾಡಿದ ಬಿಜೆಪಿಯನ್ನು ಈ ಬಾರಿ ಸೋಲಿಸಲೇ ಬೇಕಾಗಿದೆ ಎಂದರು.

ಜಾತ್ಯತೀತ ಪಕ್ಷಗಳೆಲ್ಲವೂ ಒಟ್ಟಾದರೆ ಗೆಲುವು ಕಷ್ಟವಾಗದು. ಬಿಜೆಪಿ ದುರಾಡಳಿತ, ಭ್ರಷ್ಟಚಾರ, ಬೆಲೆಯೇರಿಕೆ ಸೇರಿದಂತೆ ಅನೇಕ ವೈಫಲ್ಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಎಂದರು.

ಕಾಂಗ್ರೆಸ್ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಕೇಂದ್ರ ಸರ್ಕಾರ ಮಹಾರಾಷ್ಟ್ರದ ಅಜಿತ್ ಪವಾರ್ ಸೇರಿದಂತೆ ಹಲವು ವಿಪಕ್ಷಗಳ ನಾಯಕರ ಮೇಲೆ ಇಡಿ, ಐಟಿ ಮೂಲಕ ಪ್ರಕರಣ ದಾಖಲಿಸಿ ಬೆದರಿಸಿ ತಮ್ಮ ಪಕ್ಷ ಸೇರಿಕೊಂಡು ಕ್ಲೀನ್ ಚಿಟ್ ಕೊಡುವ ಕೆಲಸ ಮಾಡುತ್ತಿದೆ. ಆದರೆ ಅವರದೇ ಪಕ್ಷದ ಜಿ.ಎಂ.ಸಿದ್ದೇಶ್ವರ ಮಾಡಿದ ಅದಿರು ಪ್ರಕರಣ ಮತ್ತು ಹವಾಲಾ ಪ್ರಕರಣಗಳನ್ನು ಮುಚ್ಚಿಹಾಕಿದೆ ಎಂದು ದೂರಿದರು.

ಕಾಂಗ್ರೆಸ್ ಮುಖಂಡರಾದ ಸೈಯ್ಯದ್ ಸೈಫುಲ್ಲಾ, ಅಯೂಬ್, ಎಸ್. ಮಲ್ಲಿಕಾರ್ಜುನ್, ಎ. ನಾಗರಾಜ್, ಪರಮೇಶ್ ಆವರಗೆರೆ, ಅನಿತಾಬಾಯಿ ಮಾಲತೇಶರಾವ್ ಜಾಧವ್, ಡೋಲಿ ಚಂದ್ರು, ಎಲ್.ಎಂ.ಹೆಚ್. ಸಾಗರ್, ಮಂಗಳಮ್ಮ, ಮಂಜಮ್ಮ, ರೆಹಮಾನ್, ಖಾಲಿದ್ ಅಹ್ಮದ್, ಜಮ್ನಳ್ಳಿ ನಾಗರಾಜ್, ಕಮ್ಯುನಿಸ್ಟ್ ಪಕ್ಷದ ಮುಖಂಡರಾದ ಆನಂದರಾಜ್, ಆವರಗೆರೆ ಚಂದ್ರು, ಗುಡಿಹಳ್ಳಿ ನಾಗರಾಜ್, ಟಿ.ಎಸ್. ನಾಗರಾಜ್, ಆಮ್ ಆದ್ಮಿ ಪಾರ್ಟಿ ಜಿಲ್ಲಾಧ್ಯಕ್ಷ ಶಿವಕುಮಾರ್, ವಕೀಲರಾದ ಅನಿಸ್ ಪಾಷ, ರೈತ ಸಂಘದ ಪರಶುರಾಮ್ ಮತ್ತಿತರರು ಭಾಗವಹಿಸಿದ್ದರು.

## ರಾಣೇಬೆನ್ನೂರು ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

33/11 ಕೆವಿ ಚಳಗೇರಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆವಿ ಮಾರ್ಗಗಳಿಗೆ ಹಾಗೂ ರಾಣೇಬೆನ್ನೂರು, ಮುದೇನೂರು ಕುಡಿಯುವ ನೀರು ಸರಬರಾಜು, ವೆಂಕಟೇಶ್ವರ್ ಹ್ಯಾಚರಿ, ರಾಮ್ಕೋ ಫ್ಯಾಕ್ಟರಿ, ಚಳಗೇರಿ, ಕರೂರು, ಹುಣಿಸಿಕಟ್ಟೆ, ಎಣ್ಣೆಹೊಸಳ್ಳಿ, ಹುಲಿಕಟ್ಟೆ, ವಡೆಯರಹಳ್ಳಿ, ನದಿಹರಳಹಳ್ಳಿ, ಬುಡನ್ ಸಾಬ್ ಕ್ರಷರ್, ಮಾಗೋಡ, ಕಮದೋಡ, ದೇವಗೊಂಡನಹಳ್ಳಿ ಗ್ರಾಮಗಳಿಗೆ ಇಂದು ಬೆಳಿಗ್ಗೆ 11 ರಿಂದ ಸಂಜೆ 6 ರವರೆಗೆ ವಿದ್ಯುತ್ ವಿತರಣೆಯಲ್ಲಿ ವ್ಯತ್ಯಯ ಉಂಟಾಗಲಿದೆ.

## ಹರಪನಹಳ್ಳಿ ತಾಲ್ಲೂಕು ಬಿಜೆಪಿಗೆ ನೇಮಕ







ಹರಪನಹಳ್ಳಿ ಮಾ. 5- ತಾಲ್ಲೂಕಿನ ಕೆ. ಕಲ್ಲಹಳ್ಳಿ ಗ್ರಾಮದ ಕೆ.ಲಕ್ಷ್ಮಣ್ ಅವರನ್ನು ಬಿಜೆಪಿ ಮಂಡಲ ಅಧ್ಯಕ್ಷ ಸ್ಥಾನಕ್ಕೆ ನೇಮಕಗೊಳಿಸಿ, ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಆದೇಶ ಹೊರಡಿಸಿದ್ದಾರೆ. ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಸೂಚನೆಯ ಮೇರೆಗೆ ಪದಾಧಿಕಾರಿ ಘೋಷಣೆ ಮಾಡಿದ್ದು, ಮಂಡಲ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಬಾವಿಹಳ್ಳಿ ಎ. ಉದಯಕುಮಾರ್ ಮತ್ತು ವೊಡ್ಡಿನ ದಾದಾಪುರದ ಯು.ಎನ್. ಪ್ರವೀಣ್ ಅವರನ್ನು ನೇಮಿಸಲಾಗಿದೆ.

## ನಗರದಲ್ಲಿ ಇಂದು ಹರಿಪಾಠ ಭಜನೆ



ವಸಂತ ರಸ್ತೆಯಲ್ಲಿರುವ ಶ್ರೀ ವಿಠೋಬ ದೇವರ ದಿಂಡಿ ಉತ್ಸವದ ಧಾರ್ಮಿಕ ಕಾರ್ಯಕ್ರಮದಲ್ಲಿ ಇಂದು ಬೆಳಿಗ್ಗೆ 5 ಗಂಟೆಯಿಂದ ಕಾಕಡಾರತಿ, ಸಂಜೆ 4 ರಿಂದ 5 ರವರೆಗೆ ನಾಮಜಪ, 5 ರಿಂದ 6 ರವರೆಗೆ ಪ್ರವಚನ, ಸಂಜೆ 6 ರಿಂದ 7 ರವರೆಗೆ ಹರಿಪಾಠ ಭಜನೆ ರಾತ್ರಿ 9 ರಿಂದ ಕೀರ್ತನೆ ನಡೆಯಲಿದ್ದು, ನಂತರ ಪಾಳಿ ಭಜನೆ, ಪಾವುಲ್ ಭಜನೆ, ಭಾರೂಡ್ ಅಖಂಡ ಜಾಗರಣೆ ಮತ್ತು ಸಿಟಿ ಭಾವಸಾರ ಮಹಿಳಾ ಭಜನಾ ಮಂಡಳಿ, ದಾವಣಗೆರೆ ಇವರಿಂದ ಸಂಗೀತ ಭಜನಾ ಕಾರ್ಯಕ್ರಮವನ್ನು ದೇವಸ್ಥಾನದ ಆವರಣದಲ್ಲಿ ನಡೆಸಲಾಗುವುದು.

## ನಗರದಲ್ಲಿ ಇಂದು ಹೈನುಗಾರಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಆಧುನಿಕ ಹೈನುಗಾರಿಕೆ ತರಬೇತಿಯು ಇಂದು ಮತ್ತು ನಾಳೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

# ಆಂಗ್ಲಭಾಷಾ ನಾಮಫಲಕ ತೆರವು ವಿಳಂಬ ಪಾಲಿಕೆಗೆ ಬೀಗ ಜಡಿದು ಪ್ರತಿಭಟನೆ



ದಾವಣಗೆರೆ, ಮಾ. 5 - ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಆಂಗ್ಲಭಾಷಾ ನಾಮಫಲಕ ಹಾಗೂ ಜಾಹೀರಾತು ಫಲಕಗಳನ್ನು ಸಂಪೂರ್ಣವಾಗಿ ತೆರವುಗೊಳಿಸಬೇಕೆಂದು ಆಗ್ರಹಿಸಿ, ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡರ ಬಣ) ಕಾರ್ಯಕರ್ತರು ಪಾಲಿಕೆಗೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.

ಇದೇ ವೇಳೆ ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ಕಳೆದ 25 ವರ್ಷಗಳಿಂದ ನಾಡು, ನುಡಿ, ನೆಲ, ಜಲ, ಸಂಸ್ಕೃತಿ ಸಂರಕ್ಷಣೆಯ ನಿಟ್ಟಿನಲ್ಲಿ ಕರವೇ ಹೋರಾಟ ಮಾಡುತ್ತಲೇ ಬಂದಿದೆ. ಕರ್ನಾಟಕದಲ್ಲಿ ಕನ್ನಡ ಭಾಷೆ, ಕನ್ನಡಿಗನೇ ಸಾರ್ವಭೌಮ. ಆಂಗ್ಲಭಾಷಾ ನಾಮಫಲಕಗಳಿಗೆ ಮಸಿ ಬಳಿಯುವುದು, ಕಿತ್ತು ಹಾಕುವ ಮೂಲಕ ಹೋರಾಟ ನಡೆಸುತ್ತಾ ಬಂದಿದೆ ಎಂದರು.

ಇತ್ತೀಚಿಗೆ ಪಾಲಿಕೆ ಸಭೆಯಲ್ಲಿ ಈ ಬಗ್ಗೆ ಎಚ್ಚರಿಕೆ ನೀಡುವ ಮೂಲಕ ಮತ್ತು ಸಾರ್ವಜನಿಕರಿಗೆ ಗುಲಾಬಿ ಹೂ ನೀಡುವ ಮೂಲಕ ಕನ್ನಡದ ಬಗ್ಗೆ ಜಾಗೃತಿ ಮೂಡಿಸುವಂತಹ ಕೆಲಸ ಮಾಡಿದೆ. ಆದರೂ ಕಾಟಾಚಾರದ ಕನ್ನಡಿಗರು ಆಂಗ್ಲ ನಾಮಫಲಕಗಳನ್ನು ಇಟ್ಟುಕೊಂಡಿದ್ದರು. ಪಾಲಿಕೆಗೆ ತೆರವುಗೊಳಿಸುವಂತೆ ಒತ್ತಡ ತಂದಾಗ ನಗರದಲ್ಲಿ ಶೇ. 60 ರಷ್ಟು ನಾಮಫಲಕಗಳಿಗೆ ಮಸಿ ಬಳಿದು ಕಿತ್ತು ಹಾಕಲಾಗಿತ್ತು ಎಂದು ಹೇಳಿದರು.

ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಮೂಲಕ 60;40 ರ ಅನುಪಾತದಲ್ಲಿ ಅಂದರೆ ಅಂಗಡಿ ಮಾಲೀಕರು ಅಥವಾ ಸಂಸ್ಥೆ ಮಾಲೀಕರು ಹಾಕುವ ಬೋರ್ಡಿನ ಅನುಸಾರ ಶೇ. 60 ರಷ್ಟು ದೊಡ್ಡದಾಗಿ ಕನ್ನಡದಲ್ಲಿ ನಾಮಫಲಕ ಹಾಕಬೇಕೆಂದು ಆದೇಶಿಸಿದೆ. ಆದರೆ, ಪಾಲಿಕೆ ಆಯುಕ್ತರು ನಾಮಫಲಕ ವಿಚಾರವಾಗಿ ಉಸ್ತುವಾರಿಯನ್ನಾಗಿ ಪಾಲಿಕೆಯ ವೈದ್ಯಾಧಿಕಾರಿ ಡಾ. ಚಂದ್ರಮೋಹನ್ ಅವರನ್ನು ನೇಮಿಸಿತ್ತು. ನಾವು ಅವರಿಗೆ ಆಂಗ್ಲಭಾಷೆಯಲ್ಲಿರುವ ಸುಮಾರು 300 ಜಾಹೀರಾತು ಫಲಕ, ಪೆಟ್ರೋಲ್ ಬಂಕ್, ಶಾಲಾ-ಕಾಲೇಜು, ಅಂಗಡಿ ಮುಂಗಟ್ಟುಗಳ ಆಂಗ್ಲಭಾಷಾ ಫಲಕಗಳ ಛಾಯಾಚಿತ್ರಗಳನ್ನು ಕಳಿಹಿಸಿದ್ದು, ಆದರೆ ಕಾಟಾಚಾರಕ್ಕೆ ನೋಟಿಸ್ ನೀಡಿ ಮೌನ ವಹಿಸಿರುವುದು ಸರಿಯಲ್ಲ. ಮಾಲೀಕರ ಜೊತೆಗೆ ಶಾಮೀಲಾಗಿದ್ದಾರೆಂಬ ಶಂಕೆ ಇದೆ ಎಂದರು.

ಬೇರೆ ಜಿಲ್ಲೆಗಳಲ್ಲಿ ಆಯುಕ್ತರು ಮತ್ತು ಸಿಬ್ಬಂದಿ ವರ್ಗದವರು ಆಂಗ್ಲ ಭಾಷಾ ನಾಮಫಲಕಗಳಿರುವ ಅಂಗಡಿಗಳಿಗೆ ಬೀಗ ಹಾಕಿಸಿ, ಅವುಗಳನ್ನು ಕಿತ್ತು ಹಾಕುವ ಕೆಲಸವನ್ನು ಮಾಡಿದ್ದಾರೆ. ಆದರೆ ದಾವಣಗೆರೆ ಮಹಾನಗರ ಪಾಲಿಕೆ ಮೌನ ವಹಿಸಿರುವುದನ್ನು ಕರವೇ ಸಹಿಸುವುದಿಲ್ಲ. ಕೂಡಲೇ ಆಂಗ್ಲ ನಾಮಫಲಕಗಳನ್ನು ತೆರವುಗೊಳಿಸಬೇಕೆಂದು ಒತ್ತಾಯಿಸಿದರು.

ಇದೇ ದಿನಾಂಕ 13 ರೊಳಗಾಗಿ ಕನ್ನಡದಲ್ಲಿಯೇ ನಾಮಫಲಕಗಳಿರಬೇಕೆಂದು ಸರ್ಕಾರ ಆದೇಶಿಸಿದೆ. ಆಯುಕ್ತರಾಗಲೀ, ಮಹಾಪೌರರಾಗಲೀ ಯಾವುದೇ ಸಭೆ ಕರೆದಿಲ್ಲ. ತಕ್ಷಣ ಸಭೆ ನಡೆಸಿ, ಪಾಲಿಕೆ ಆಯುಕ್ತರು ಫ್ಲೆಕ್ಸ್, ಪ್ರಿಂಟರ್, ಡಿಸೈನ್ ಮಾಡುವವರಿಗೆ ಸೂಚನೆ ನೀಡಬೇಕೆಂದು ಆಗ್ರಹಿಸಿದರು.

ಇದೇ ವೇಳೆ ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್ ಅವರಿಗೆ ಮನವಿ ಸಲ್ಲಿಸಿ, ದಿನಾಂಕ 10 ರೊಳಗೆ ತೆರವುಗೊಳಿಸಬೇಕೆಂದು ಒತ್ತಾಯಿಸಿದರು. ಇಲ್ಲವಾದರೆ ದಿನಾಂಕ 10 ರ ಸಂಜೆ 5 ಕ್ಕೆ ಮತ್ತೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮಹಿಳಾ ಘಟಕದ ಅಧ್ಯಕ್ಷೆ ಬಸಮ್ಮ, ಹರಿಹರ ತಾಲ್ಲೂಕು ಅಧ್ಯಕ್ಷೆ ನೇತ್ರಾವತಿ, ಮಾಲಾ ಮಲ್ಲಿಕಾರ್ಜುನ್, ಗೋಪಾಲ್ ದೇವರಮನಿ, ಎನ್.ಟಿ. ಹನುಮಂತಪ್ಪ, ಜಿಎಸ್ ಸಂತೋಷ್, ಜಬಿವುಲ್ಲಾ, ಆಟೋ ರಫೀಕ್, ಖಾದರ್ ಬಾಷಾ, ರವಿಕುಮಾರ್, ರಾಜೇಶ್, ಶಶಿಕುಮಾರ್, ಮಹಾಂತೇಶ್, ಸುರೇಶ್, ಮುನ್ನ, ರುದ್ರಗೌಡರು, ಅಮಾನುಲ್ಲಾ ಖಾನ್, ಮುಸ್ತಾಫ,ಸುರೇಶ್. ರಾಘವೇಂದ್ರ, ವಿನಯ್, ಮಂಜು, ಚಂದ್ರು, ಕರಿಯಪ್ಪ, ತುಳಸೀರಾಮ್, ಕರಿಬಸಪ್ಪ, ರಾಜೇಶ್, ದಾದಾಪೀರ್ ಮತ್ತಿತರರು ಪಾಲ್ಗೊಂಡಿದ್ದರು.

## ಇಂದು ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾದಿಂದ ವಿವಿಧ ಕಾರ್ಯಕ್ರಮ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಇಂದು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30 ರಿಂದ 10 ರವರೆಗೆ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ವತಿಯಿಂದ 'ನಾರಿ ವಂದನಾ ಮ್ಯಾರಾಥಾನ್' (ಪಾದಯಾತ್ರೆ), 'ಮಾತೃ ಹೃದಯ ಮೋದಿ ವಿಜಯ' ಶೀರ್ಷಿಕೆ ಅಡಿಯಲ್ಲಿ ಜಿಲ್ಲೆಯ ಎಲ್ಲಾ ಸಮಾಜಗಳ, ವಿವಿಧ ಸಂಘ-ಸಂಸ್ಥೆಗಳ ಮಹಿಳೆಯರು ಒಂದಾಗಿ ಬಿಜೆಪಿ ಕಚೇರಿಯಿಂದ ಜಯದೇವ ಸರ್ಕಲ್ ವರೆಗೂ 'ನಮ್ಮ ನಡಿಗೆ ಮೋದಿ ಕಡೆಗೆ' ಎಂಬ ಧ್ಯೇಯ ವಾಕ್ಯದೊಂದಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.


ಬೆಳಿಗ್ಗೆ 10.30 ಕ್ಕೆ ಪ್ರಧಾನಿ ನರೇಂದ್ರ ಮೋದಿಯವರ ಭಾಷಣದ ನೇರ ಪ್ರಸಾರದ ವೀಕ್ಷಣೆಯ ಅವಕಾಶ ಮಾಡಲಾಗಿದೆ.

ದಾವಣಗೆರೆ ಉತ್ತರ, ದಕ್ಷಿಣ, ಮಾಯಕೊಂಡ ಮಂಡಲಗಳು ಜಿಲ್ಲಾ ಬಿಜೆಪಿ ಕಚೇರಿಯಲ್ಲಿ, ಉಳಿದಂತೆ ಹರಿಹರ, ಜಗಳೂರು, ಚನ್ನಗಿರಿ ಬಿಜೆಪಿ ಕಚೇರಿಗಳಲ್ಲಿ ಆಯೋಜಿಸಲಾಗಿದೆ.

ನಂತರ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಮಹಿಳಾ ಸಮಾವೇಶ ನಡೆಯಲಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಷ್ಪ ವಾಲಿ ತಿಳಿಸಿದ್ದಾರೆ.



# ಗ್ಯಾರಂಟಿಗೆ ಆಶಾ ಕಾರ್ಯಕರ್ತೆಯರ ನಿಯೋಜನೆ : ಕುಮಾರಸ್ವಾಮಿ ತರಾಟೆ



ಬೆಂಗಳೂರು, ಮಾ. 5 - ಗ್ಯಾರಂಟಿಗಳ ಸಮೀಕ್ಷೆಗೆ ಅಂಗನವಾಡಿ, ಆಶಾ ಕಾರ್ಯಕರ್ತೆಯರನ್ನು ನಿಯೋಜನೆ ಮಾಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಕ್ರಮವನ್ನು ಮಾಜಿ ಮುಖ್ಯಮಂತ್ರಿ ಹೆಚ್. ಡಿ.ಕುಮಾರಸ್ವಾಮಿ ಇಂದಿಲ್ಲಿ ಟೀಕಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, ಪಲ್ಸ್ ಪೋಲಿಯೋ ಲಸಿಕೆ ಅಭಿಯಾನಕ್ಕೆ ನಿಯೋಜಿತವಾಗಿ ರುವ ಅಂಗನವಾಡಿ, ಆಶಾ ಕಾರ್ಯಕರ್ತೆಯರಿಂದ ರಾಜ್ಯ ಸರ್ಕಾರ ಮಾಡಿಸುತ್ತಿರುವ ಗ್ಯಾರಂಟಿ ಸಮೀಕ್ಷೆ ಲಜ್ಜೆಗೇಡಿತನದ ಪರಮಾವಧಿ.

ಈ ಮಹಿಳೆಯರಿಗೆ 'ಗ್ಯಾರಂಟಿ ಸ್ವಯಂ ಸೇವಕರು' ಅಂತ ಹೆಸರಿಡಲಾಗಿದೆ. ಹಾಗಾದರೆ, ಗ್ಯಾರಂಟಿ ಸಮೀಕ್ಷೆ ಹೆಸರಿನಲ್ಲಿ ತಮಗೆ ಬೇಕಾದ ಸಂಸ್ಥೆಗಳಿಗೆ ಕೋಟಿ-ಕೋಟಿ ಲೆಕ್ಕದಲ್ಲಿ ಸುರಿದ ಜನರ ತೆರಿಗೆ ಹಣ ಎಲ್ಲಿಗೆ ಹೋಯಿತು? ಎಂದು ಪ್ರಶ್ನಿಸಿದ್ದಾರೆ.

ಮಾಜಿ ಸಚಿವ ಹೆಚ್.ಎಂ.ರೇವಣ್ಣ ಅವರಿಗೆ ಸಂಪುಟ ದರ್ಜೆ ಕೊಟ್ಟು ರಚಿಸಲಾಗಿರುವ 'ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ' ಏನು ಮಾಡುತ್ತಿದೆ?

ಜಿಲ್ಲೆ, ತಾಲ್ಲೂಕು, ವಿಧಾನಸಭಾ ಕ್ಷೇತ್ರಗಳ ಮಟ್ಟ ದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳು ಸಮೀಕ್ಷೆ ಮಾಡುತ್ತಿಲ್ಲವೇ? ಗ್ಯಾರಂಟಿ ಅನುಷ್ಠಾನ ನಿರ್ವಹಣೆಗೆ ವಾರ್ಷಿಕ 16 ಕೋಟಿ ರೂ. ವೆಚ್ಚ ಮಾಡುತ್ತೇವೆ ಎಂದಿದ್ದಾರೆ. ಹಾಗಾದರೆ, ಇದಕ್ಕೆ ಆಗುತ್ತಿರುವ ವೇತನ, ಭತ್ಯೆಗಳೆಲ್ಲ ವ್ಯರ್ಥವೇ? ಎಂದಿದ್ದಾರೆ.

ಅಂಗನವಾಡಿಗೆ ಬರುವ ಮಕ್ಕಳ ಲಾಲನೆ ಪಾಲನೆ, ಗರ್ಭಿಣಿಯರು-ಬಾಣಂತಿಯರಿಗೆ ಊಟ, ಪ್ರತಿ ತಿಂಗಳ ಮೊದಲ ಮತ್ತು 3ನೇ ಶುಕ್ರವಾರ ಪೋಷಣ್ ಅಭಿಯಾನ, 3ನೇ ಶನಿವಾರ ಬಾಲವಿಕಾಸ ಸಮಿತಿ ಸಭೆಗೆ ಹಾಜರಿ, ಜತೆಗೆ ಇಲಾಖೆ ನಿಯೋಜಿಸುವ ಕೆಲಸಗಳನ್ನೂ ನಿರ್ವಹಿಸಬೇಕು.

ಇದರ ನಡುವೆ ಗ್ಯಾರಂಟಿ ಸಮೀಕ್ಷೆಯ ಹೊರೆ ಹೊರಿಸಲಾಗಿದೆ ಎಂದು ಕುಮಾರಸ್ವಾಮಿ ಟೀಕಿಸಿದ್ದಾರೆ.

# ರಾಷ್ಟ್ರೀಯ ಲೋಕ ಅದಾಲತ್ ಮುಂದೂಡಿಕೆ

ದಾವಣಗೆರೆ, ಮಾ.5- ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಇದೇ ದಿನಾಂಕ 9 ರಂದು ಆಯೋಜಿಸಲಾಗಿದ್ದ ರಾಷ್ಟ್ರೀಯ ಲೋಕ್ ಅದಾಲತ್ತನ್ನು ಇದೇ ದಿನಾಂಕ 16 ಕ್ಕೆ ಮುಂದೂಡಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ ತಿಳಿಸಿದ್ದಾರೆ.

# ಜಿಲ್ಲಾ ಕಬಡ್ಡಿ ಪ್ರೀಮಿಯರ್ ಲೀಗ್ 8 ತಂಡಗಳಿಗೆ ಆಟಗಾರರ ಹರಾಜು



ದಾವಣಗೆರೆ, ಮಾ. 5 - ಜಿಲ್ಲಾ ಅಮೆಚೂರ ಕಬ್ಬಡ್ಡಿ ಸಂಸ್ಥೆ ಹಾಗೂ ಜನಪ್ರಿಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ದಾವಣಗೆರೆ ಜಿಲ್ಲಾ ಮಟ್ಟದ ಕಬ್ಬಡ್ಡಿ ಪ್ರಿಮಿಯರ್ ಲೀಗ್ (JKPL)-24 ಇದರ ಪ್ರಯುಕ್ತ 8 ತಂಡಗಳಿಗೆ ಆಟಗಾರರ ಹರಾಜು ಪ್ರಕ್ರಿಯೆ ನಡೆಸಲಾಯಿತು.

ದಿನೇಶ್ ಕೆ.ಶೆಟ್ಟಿ ಅವರು ದೀಪ ಬೆಳಗಿಸುವುದರ ಮೂಲಕ ಚಾಲನೆ ನೀಡಿದರು. ಪಂದ್ಯಾವಳಿಯ ಸಂಘಟಕ ಜಯಪ್ರಕಾಶ್ ಗೌಡ ಜೆ.ಪಿ. ಇವರ ಅಧ್ಯಕ್ಷತೆಯಲ್ಲಿ ಹರಾಜು ನಡೆಸಲಾಯಿತು. ಈ ಸಂದರ್ಭದಲ್ಲಿ ರಾಜು ರೆಡ್ಡಿ, ಶಿವಗಂಗಾ ಶ್ರೀನಿವಾಸ್, ಕುರುಡಿ ಗಿರೀಶ್ ಲೀಲಾ, ಎಂ. ದೊಡ್ಡಪ್ಪ, ಹೆಚ್. ನಿಜಗುಣ, ಎಂ .ನಾಗರಾಜ, ಹೆಚ್. ಚಂದ್ರು ಉಪಸ್ಥಿತರಿದ್ದರು.

# ಕಲಾಕುಂಚ ಜಿಲ್ಲಾಧ್ಯಕ್ಷರಾಗಿ ಪರಮೇಶ್ವರಯ್ಯ



ದಾವಣಗೆರೆ, ಮಾ. 5- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಹಾವೇರಿ ಜಿಲ್ಲಾಧ್ಯಕ್ಷರಾಗಿ ಪರಮೇಶ್ವರಯ್ಯ ವೀರಭದ್ರಯ್ಯ ಮಠದ್ ನೇಮಕಗೊಂಡಿದ್ದಾರೆ.

# ದ್ವಿತೀಯ ಪಿಯು ರಾಜ್ಯಶಾಸ್ತ್ರ 589 ಗೈರು

ದಾವಣಗೆರೆ, ಮಾ.5- ಜಿಲ್ಲೆಯಲ್ಲಿ ಮಂಗಳವಾರ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯ ರಾಜ್ಯಶಾಸ್ತ್ರ ವಿಷಯಕ್ಕೆ 589 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ನೋಂದಾಯಿಸಿಕೊಂಡಿದ್ದ 4722 ವಿದ್ಯಾರ್ಥಿಗಳ ಪೈಕಿ 4133 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಸಂಖ್ಯಾಶಾಸ್ತ್ರ ವಿಷಯಕ್ಕೆ ನೋಂದಾಯಿಸಿಕೊಂಡಿದ್ದ 1155 ವಿದ್ಯಾರ್ಥಿಗಳ ಪೈಕಿ 1115 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 40 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

# ಬರ ಎದುರಿಸಲು ಕೇಂದ್ರ 18,172 ಕೋಟಿ ರೂ. ಬಿಡುಗಡೆ ಮಾಡಿಲ್ಲ



ಬೆಂಗಳೂರು, ಮಾ. 5 – ರಾಜ್ಯದ ಬಹುತೇಕ ಭಾಗ ಬರದಿಂದ ಬಳಲುತ್ತಿದೆ. ಬರ ಪರಿಸ್ಥಿತಿ ಎದುರಿಸಲು ಕೇಂದ್ರ ಸರ್ಕಾರ 18,172 ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಉದ್ಯೋಗ ಖಾತ್ರಿ ಮಾನವ ದಿನಗಳನ್ನು ಈಗಿರುವ 100ರಿಂದ 150ಕ್ಕೆ ಹೆಚ್ಚಿಸಲೂ ಸಹ ಕೇಂದ್ರ ಸರ್ಕಾರ ಅನುಮತಿ ನೀಡಿಲ್ಲ ಎಂದವರು ಆಕ್ಷೇಪಿಸಿದ್ದಾರೆ.

ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಪಾವತಿಗೆ ನೀಡಬೇಕಾದ 1,600 ಕೋಟಿ ರೂ.ಗಳನ್ನೂ ಕೇಂದ್ರ ಸರ್ಕಾರ ಬಿಡುಗಡೆ ಮಾಡಿಲ್ಲ.

ಬರ ಪರಿಹಾರಕ್ಕಾಗಿ 18,172 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಅಕ್ಟೋಬರ್ 20, 2023ರಂದು ಮನವಿ ಸಲ್ಲಿಸಲಾಗಿತ್ತು. ಆದರೆ, ಇದುವರೆಗೂ ಕೇಂದ್ರ ಸರ್ಕಾರ ನಯಾ ಪೈಸೆ ಬಿಡುಗಡೆ ಮಾಡಿಲ್ಲ ಎಂದರು.

# ಶ್ರೀ ಈಶ್ವರಾನಂದ ಸ್ವಾಮೀಜಿ ಲಿಂಗೈಕ್ಯ



ರಾಣೇಬೆನ್ನೂರು, ಮಾ. 5- ತಾಲ್ಲೂಕಿನ ಅಂಕಸಾಪೂರ ಗ್ರಾಮದ ಶಿವಾನಂದ ಮಠದ 52 ವಯಸ್ಸಿನ ಶ್ರೀ ಈಶ್ವರಾನಂದ ಸ್ವಾಮೀಜಿ ಹುಬ್ಬಳ್ಳಿಯ ಸಾಯಿ ಆಸ್ಪತ್ರೆಯಲ್ಲಿ ಲಿಂಗೈಕ್ಯರಾಗಿದ್ದು, ಸಂಜೆ ಮಠದ ಆವರಣದಲ್ಲಿ ತೇರದಾಳ ದಯಾನಂದಶ್ರೀ ಹಾಗೂ ಐರಣಿ ಮನಿ ಮಠದ ಚರಮೂರ್ತಿಗಳ ಸಮ್ಮುಖದಲ್ಲಿ ಅಂತಿಮ ವಿಧಿ ವಿಧಾನಗಳನ್ನು ನಡೆಸಲಾಯಿತು.

ಹರಿಹರ ತಾಲ್ಲೂಕಿನ ಪಾಳ್ಯ ಗ್ರಾಮದ ಮಹದೇವಪ್ಪ ವಸಂತಮ್ಮ ದಂಪತಿ ಪುತ್ರರಾದ ಶ್ರೀಗಳು 30 ವರ್ಷಗಳ ಹಿಂದೆ ಅಂಕಸಾಪುರ ಗ್ರಾಮಕ್ಕೆ ಆಗಮಿಸಿ, ಅಲ್ಲಿ ಮಠ ಕಟ್ಟಿ ಆಂಜನೇಯ ಸ್ವಾಮಿ ಆರಾಧನೆಯೊಂದಿಗೆ ಸುತ್ತಲಿನ ಹತ್ತಾರು ಗ್ರಾಮಗಳ ಜನರಿಗೆ ಧರ್ಮ ಬೋಧಿಸುತ್ತಿದ್ದರು. ಗದಗ ಜಿಲ್ಲೆಯ ಬೆಟಗೇರಿಯಲ್ಲಿ ಸಿದ್ದಾರೂಢರ ಮಠ ಕಟ್ಟಿ ಬೆಳೆಸಿದ್ದರು. ಶ್ರೀಗಳ ಅಗಲಿಕೆಯ ಸುದ್ದಿ ತಿಳಿದ ಸಾವಿರಾರು ಭಕ್ತರು ಕಂಬನಿ ಮಿಡಿದಿದ್ದಾರೆ.


**10ನೇ ವರ್ಷದ ಪುಣ್ಯಸ್ಮರಣೆ**

ನಿನ್ನೊಲುಮೆ ನಮಗಿರಲಿ ತಂದೆ...



ದಿ|| ಶ್ರೀ ಬಳ್ಳಾರಿ ಎಂ. ಬಸವರಾಜಪ್ಪ

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ,

ಶ್ರೀಮತಿ ದೇವೀರಮ್ಮ ಬಸವರಾಜಪ್ಪ ಮತ್ತು ಮಕ್ಕಳು ಹಾಗೂ ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಬಂಧು-ಮಿತ್ರರು, ಕಡ್ಲೆಬಾಳು.

ಮೊ. : 86603 15828



YOGI RAM SHASHI EDUCATIONAL TRUST (R)

**LALITHA PRE UNIVERSITY COLLEGE**
**LALITHA INTERNATIONAL PUBLIC SCHOOL**

LOKIKERE MAIN ROAD, DAVANAGERE - 577 005.

**WANTED**

| SUBJECTS | QUALIFICATION | EXPERIENCE |
|---|---|---|
| | PUC SECTION | |
| PHYSICS | M.Sc., B.Ed. | Min. 5 YEARS |
| CHEMISTRY | M.Sc., B.Ed. | Min. 5 YEARS |
| MATHEMATICS | M.Sc., B.Ed. | Min. 5 YEARS |
| BOTONY | M.Sc., B.Ed. | Min. 5 YEARS |
| ZOOLOGY | M.Sc., B.Ed. | Min. 5 YEARS |
| ENGLISH | M.A., B.Ed., | Min. 5 YEARS |
| PHYSICAL INSTRUCTOR | M.P. Ed., | Min. 3 YEARS |
| WARDENS | BA / B.Sc. B.Ed., | Min. 3 YEARS |
| | SCHOOL SECTION | |
| ENGLISH/SOCIAL MATHS/SCIENCE | B.Sc./M.Sc./ B.Ed., | Min. 3 YEARS |

Note : 1) Fluency in English is a must.
2) Minimum 3 years experience in an English Medium School is mandatory
3) Candidates who is selected must sign in an agreement for 2 years.
4) Recruited science Lecturers must deal with CET/NEET/JEE coaching along with the completion of PU Board syllabus

Contact : 7022004042 / 7022004109 / 9980629965



**ಶ್ರೀಮತಿ ಗಂಗಾ ಕೋಗುಂಡಿಮಠ ನಿಧನ**



ದಾವಣಗೆರೆ ಎನ್ ಆರ್ ರಸ್ತೆ ವಾಸಿ ಡಾ|| ಬಕ್ಕೇಶ್ವರ ಸ್ವಾಮಿ ಇವರ ಧರ್ಮಪತ್ನಿ

**ಶ್ರೀಮತಿ ಗಂಗಾ ಕೋಗುಂಡಿಮಠ**

ಇವರು, ದಿನಾಂಕ 05-03-2024 ರ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು.

ಪತಿ, ಓರ್ವ ಪುತ್ರ, ಓರ್ವ ಪುತ್ರಿ ಮತ್ತು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ದಿನಾಂಕ : 06-03-2024ರ ಬುಧವಾರ ಬೆಳಿಗ್ಗೆ 10 ಗಂಟೆಯಿಂದ 1 ಗಂಟೆಯವರೆಗೆ ಎನ್ಆರ್ ರಸ್ತೆಯ ಮೃತರ ಸ್ವಗೃಹದಲ್ಲಿ ಇರಿಸಲಾಗುವುದು. ನಂತರ ನಗರದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬದವರು, ಪತಿ : ಡಾ|| ಬಕ್ಕೇಶ್ವರ ಸ್ವಾಮಿ
ಮಗ : ವಿನಯ್ ಕೆ.ಬಿ., ಪುತ್ರಿ : ವಿದ್ಯಾ ಕೆ.ಬಿ.
ಮೊ : 99861-77882



**ಬ್ರಾಂಡ್ಸ್ ಗಾರ್ಮೆಂಟ್ಸ್ ಪ್ರದರ್ಶನ**

ಗ್ರಾಹಕರ ಭಾರೀ ಖರೀದಿ ಹಾಗೂ ಒತ್ತಾಯದ ಮೇರೆಗೆ ಸೇಲ್ 4 ದಿನಗಳ ಕಾಲ ಮುಂದುವರೆಸಲಾಗಿದೆ

ಪುರುಷರ, ಮಹಿಳೆಯರ ಹಾಗೂ ಮಕ್ಕಳ ಸಿದ್ಧ ಉಡುಪುಗಳು

ಸೂಚನೆ : ಕಂಪನಿಯ ಆರ್ಥಿಕ ಹಣ ಕಾಸಿನ ಬಿಕ್ಕಟ್ಟಿನಿಂದ ಹಾಗೂ ಪಾರ್ಟಿ ಮಿತಿಮೀರಿದ ಬಾಕಿ ಹಣದ ಪಾವತಿ ಇರುವುದರಿಂದ ಎಲ್ಲಾ ಹೊಸ ಗಾರ್ಮೆಂಟ್ಸ್‌ಗಳನ್ನು ಅತಿ ಕಡಿಮೆ ದರದಲ್ಲಿ ಮಾರಾಟ ಮಾಡಲು ಕಂಪನಿಯು ನಿರ್ಧರಿಸಿದೆ. ಆದ್ದರಿಂದ ದಾವಣಗೆರೆ ಗ್ರಾಹಕರಿಗೆ ಭಾರಿ ರಿಯಾಯಿತಿ ದರದಲ್ಲಿ ಮಾರಟ ಮಾಡಲಾಗುತ್ತಿದೆ. ಬ್ರಾಂಡೆಡ್ ರೆಡಿಮೇಡ್ ಉಡುಪುಗಳ ಭಾರಿ ರಿಯಾಯಿತಿ ಮಾರಾಟವು

ಕೇವಲ 4 ದಿನಗಳ ವರೆಗೆ. ಈ ಅವಕಾಶವನ್ನು ಕಳೆದು ಕೊಳ್ಳಬೇಡಿ.

ದಾವಣಗೆರೆ ಗ್ರಾಹಕರಿಗೆ ವಿನಮ್ರ ಮನವಿ ದಯವಿಟ್ಟು ಭೇಟಿ ನೀಡಿ.

UPTO 80% DISCOUNT ರವರೆಗೆ ಭಾರಿ ರಿಯಾಯಿತಿ ಮಾರಾಟ

ಇಂದು ಏನಾಗುತ್ತಿದಯೋ ಅದು ಹಿಂದೆಂದೂ ಸಂಭವಿಸಿಲ್ಲ

VAN HEUSEN

ಬಾಲಕಿಯರ,* ಮಹಿಳೆಯರ* ಹಾಗೂ ಪುರುಷರ* ಒಳ ಉಡುಪುಗಳು
ಕೇವಲ ರೂ. 40/-*, 80/-* ಹಾಗೂ 150/-* ಮಾತ್ರ

ಪುರುಷರ ಸಿದ್ಧ ಉಡುಪುಗಳು (ಗಾರ್ಮೆಂಟ್ಸ್)
ಟಿ-ಶರ್ಟ್, ಶರ್ಟ್, ಪ್ಯಾಂಟ್, ಬರ್ಮುಡಾ, ಟ್ರಾಕ್ ಪ್ಯಾಂಟ್ ಇತ್ಯಾದಿ
ಕೇವಲ ರೂ. 199/- ರಿಂದ 399/-

DANIEL HECHTER, HIGHLANDER, INDIGO NATION, BEAT, IZOD, LOCOMOTIVE, INDIAN TERRAIN, BARE, Pepe Jeans LONDON, JOHN MILLER, SCULLERS, JACK & JONES, ONLY, VERO MODA

ಪುರುಷರ ಪ್ರೀಮಿಯಂ ಸಿದ್ಧ ಉಡುಪುಗಳು (ಗಾರ್ಮೆಂಟ್ಸ್) MRP Upto ರೂ. 5999/-
ಶರ್ಟ್, ಟಿ-ಶರ್ಟ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಕುರ್ತ, ಲೋವರ್, ಜಾಕೆಟ್, ಪುಲೋವರ್ ಇತ್ಯಾದಿ
ಕೇವಲ ರೂ. 499/- ರಿಂದ 999/-

ಮಹಿಳೆಯರ ಸಿದ್ಧ ಉಡುಪುಗಳು (ಗಾರ್ಮೆಂಟ್ಸ್) MRP Upto ರೂ. 2999/-
ಟಾಪ್ಸ್, ಪೈಜಾಮ, ಲೆಗೀನ್ಸ್, ಪ್ಲಾಜಾ, ಜಾಕೆಟ್, ಲಾಂಗ್ ಕುರ್ತಿ, ವೆಸ್ಟ್ರನ್ ಔಟ್ ಫಿಟ್, ಲಾಂಗ್ ಸ್ಕರ್ಟ್ ಇತ್ಯಾದಿ
ಕೇವಲ ರೂ. 149 /- ರಿಂದ 599/-

ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳಿಗೆ ಸಿದ್ಧ ಉಡುಪುಗಳು (ಗಾರ್ಮೆಂಟ್ಸ್)
ಟಿ-ಶರ್ಟ್, ಟಾಪ್ಸ್, ಪೈಜಾಮ, ಶರ್ಟ್, ಪ್ಯಾಂಟ್, ಲೋವರ್, ಫ್ರಾರ್ಕ್ ಇತ್ಯಾದಿ ಕೇವಲ ರೂ. 149 /- ರಿಂದ 349/-

ರಾಜಸ್ತಾನಿ ರಾಯಲ್ಸ್ ಪ್ರಿಂಟೆಡ್ ಬೆಡ್‌ಶೀಟ್‌ಗಳು, ಪಿಲ್ಲೋಕವರ್, ಸೋಫಾಕವರ್‌ಗಳು ಭಾರಿ ರಿಯಾಯಿತಿ ಮಾರಾಟ

ಸೇಲ್ ಕೇವಲ 4 ದಿನಗಳು ಮಾತ್ರ
6 ಬುಧ 7 ಗುರು 8 ಶುಕ್ರ 9 ಶನಿವಾರ ಮಾರ್ಚ್ 2024
ಬೆಳಿಗ್ಗೆ 10 ರಿಂದ ರಾತ್ರಿ 10 ರವರೆಗೆ ಊಟದ ವಿರಾಮವಿಲ್ಲ
*T & C Apply

ಉಚಿತ ಪ್ರವೇಶ ಪಾರ್ಕಿಂಗ್
All Major Debit / Credit Cards. Google Pay, Phon ePe Accepted

**ಹೋಟೆಲ್ ಸದರ್ನ್ ಸ್ಟಾರ್**
(Full AC Hall)
3993/23, ಶ್ಯಾಮನೂರ ರಸ್ತೆ, ಎಸ್.ಎಸ್. ಲೇಔಟ್, ಎ.ಬ್ಲಾಕ್, ಲಕ್ಷ್ಮೀ ಫ್ಲೋರ್‌ಮಿಲ್ ಹತ್ತಿರ, ದಾವಣಗೆರೆ.
Venue : HOTEL SOUTHERN STAR
3993/23, Shamanur Road, S.S. Layout, A. Block, Near Lakshmi Flour Mill, Davanagere.



